ಅನುಷ್ಠಾನ ಮಾಡುತ್ತಿರಬೇಕು. ಸಮ್ಯಗ್ದೃಷ್ಟಿಯು ಸಾವಿಗೆ ಅಂಜುವುದಿಲ್ಲ. ಮರಣವನ್ನು ಸ್ವಾಗತಿಸುತ್ತಾನೆ. ಅಂತ್ಯಸಮಯದಲ್ಲಿ ಸಲ್ಲೇಖನ ಸಹಿತ ಸಮಾಧಿ ಮರಣವನ್ನು ಅಪೇಕ್ಷಿಸುತ್ತಾನೆ. ಹೀಗಾಗಿ ಸಲ್ಲೇಖನವು ಆತ್ಮಸಾಧಕನ ಸಾರ್ಥಕತೆ.

## 82. ಜೈನ ಸ್ತೋತ್ರ ಸಾಹಿತ್ಯ

ಜೈನ ವಾಙ್ಮಯದಲ್ಲಿ ಜಿನೇಂದ್ರ ಭಗವಂತನ, ಪಂಚಪರಮೇಷ್ಠಿಗಳ, ತೀರ್ಥಂಕರರ, ಜಿನವಾಣಿಯ, ಜಿನಗುರುಗಳ, ಜಿನಶಾಸನ ದೇವತೆಗಳ, ತೀರ್ಥ ಕ್ಷೇತ್ರಗಳ ಸ್ತೋತ್ರ, ಸ್ತವನ, ಸ್ತುತಿ, ಭಜನೆ, ಪೂಜಾಷ್ಟಕ, ಸಹಸ್ರನಾಮ, ಅಷ್ಟೋತ್ತರ, ಜಯಮಾಲೆ, ಮುಂತಾದವುಗಳು ವಿವಿಧರೀತಿಯ ಛಂದಸ್ಸು, ಅಲಂಕಾರ ಆಕಾರ ಪ್ರಕಾರಗಳಲ್ಲಿ, ವಿವಿಧ ಭಾಷೆಗಳಲ್ಲಿ ಪರಂಪರಾಗತವಾಗಿ ಪ್ರಾಚೀನಕಾಲದಿಂದಲೂ ಇವೆ. ಇವು ಶಾಸನಗಳಲ್ಲಿ, ಓಲೆಗರಿಗಳಲ್ಲಿ, ಗ್ರಂಥಗಳಲ್ಲಿ ಸಾಹಿತ್ಯರೂಪದಲ್ಲಿ ಪ್ರಕಟವಾಗಿವೆ. ಮತ್ತಷ್ಟು ಜನರ ಬಾಯಿಯಲ್ಲಿ, ಜನಪದಸಾಹಿತ್ಯ ರೂಪದಲ್ಲಿ ಇವೆ.

ಸಕಲ ವಾಙ್ಮಯ ತತ್ತ್ವ ಭೋಧ ಶ್ರೋತ್ರವಾದ, ಉದ್ಭೂತ ಬುದ್ಧಿ ಪಟುವಾದ, ಮಹಾಶ್ರುತ ಜ್ಞಾನಿಯಾದ, ಪರಮಜಿನೇಂದ್ರನ ಭಕ್ತನಾದ ದೇವೇಂದ್ರನು ಜಿನದೇವ, ಜಿನವಾಣಿ, ಜಿನಗುರುಗಳನ್ನು ವಿವಿಧ ಸಂದರ್ಭಗಳಲ್ಲಿ ಅತ್ಯಂತ ಭಕ್ತಿ ಭಾವ ಪರವಶನಾಗಿ ತನ್ಮಯತೆಯಿಂದ ಸಂಗೀತಮಯವಾಗಿ ಹಾಡುತ್ತಾ, ನರ್ತಿಸುತ್ತಾ ಸ್ತೋತ್ರಮಾಡುತ್ತಾನೆ. ಭಜನೆ ಮಾಡುತ್ತಾನೆ. ಈತನು ಮಾಡುವ ಸ್ತೋತ್ರವು ಜಗತ್ತಿನ ಜೀವಿಗಳ ಚಿತ್ತಾಕರ್ಷಕವಾಗಿರುತ್ತದೆ. ಇಂಪಾಗಿರುತ್ತದೆ. ಆನಂದಕರವಾಗಿರುತ್ತದೆ. ಕೇಳುಗರೆಲ್ಲಾ ಮೈಮರೆತು ಭಕ್ತಿಭಾವ ಪರವಶರಾಗುವಂತಿರುತ್ತದೆ.

ದೇವಪರಿವಾರವೆಲ್ಲಾ ತೀರ್ಥಂಕರರ ಪಂಚಕಲ್ಯಾಣಗಳ ಸಮಯದಲ್ಲಿ,



ನಂದೀಶ್ವರ ಅಷ್ಟಾಹ್ನಿಕದಲ್ಲಿ, ಲೋಕದೊಳಗಿನ ಕೃತ್ರಿಮ ಅಕೃತ್ರಿಮ ಚೈತ್ಯಾಲಯಗಳಲ್ಲಿ, ಸಮವಸರಣದಲ್ಲಿ ಪೂಜೆಮಾಡುವಾಗ, ಆರತಿ ಬೆಳಗುವಾಗ ತನ್ಮಯರಾಗಿ ಸ್ತುತಿಮಾಡುತ್ತಾರೆ. 'ಸಂಗೀತ ಸ್ತುತಿ ಮಂಗಲ್ಯೈಃ' ಎಂಬಂತೆ ಹಲವಾರು ವಾದ್ಯ ಸಮೇತ ಸಂಗೀತ ಮಯವಾಗಿರುತ್ತದೆ ಅವರ ಸ್ತೋತ್ರ. ತೀರ್ಥಂಕರರ ಜನ್ಮಾಭಿಷೇಕವಾದನಂತರ ಬಾಲ ಲೀಲೆಯ ಸಂದರ್ಭದಲ್ಲಿಯಂತೂ ಅತಿಶಯ ವಾದ ರೀತಿಯಲ್ಲಿ ಪರಮೋತ್ಸಾಹದಿಂದ ಭಗವಂತನ ಗುಣಗಾನ ಗರ್ಭಿತವಾದ ಸ್ತೋತ್ರ ಮಾಡುವುದು ವರ್ಣನಾತೀತವಾಗಿರುತ್ತದೆ. ಭಗವಂತನ ಜಯ ಮಾಲೆಯ ಒಂದು ಪದ್ಯ ಹೀಗಿದೆ.

ಜಯಗುಣಮಣಿರತ್ನಾಕರ ।
ಜಯಭುವನತ್ರಯ ಲಲಾಮ ಜಯಮನಸಿಜದು -
ಜಯಜಯ ವಿನೇಯ ಬಾಂಧವ ।
ಜಯಮಂದರ ಶಿಖರೀ ಶಿಖರ ರತ್ನೋತ್ತಂಸ।

(ಪಂಪಕವಿಯ ಆದಿಪುರಾಣ)

ಈ ಪದ್ಧತಿಯು ಪರಂಪರಾಗತಗತವಾಗಿ ಜೈನಸಂಪ್ರದಾಯದಲ್ಲಿ ಹರಿದು ಬಂದಿದೆ. ಜಿನ ಭಕ್ತರು, ವೈಯಕ್ತಿಕವಾಗಿ, ಸಾಮೂಹಿಕವಾಗಿ ಸ್ತೋತ್ರ ಮಾಡುವ ಪದ್ಧತಿಯುಂಟು. ಈ ಸ್ತೋತ್ರಗಳು ಪೂಜಾರಾಧನೆ ಮಾಡುವಾಗ, ಆರತಿ ಬೆಳಗುವಾಗ, ಭಜನೆ ಮಾಡುವಾಗ ಭಕ್ತಿಪೂರ್ವಕವಾಗಿ ಹೇಳುವಂತಹವುಗಳಾಗಿವೆ. ಇವುಗಳಲ್ಲಿ ಜಿನೇಂದ್ರ ಭಗವಂತನ, ಜಿನವಾಣಿಯ, ಜಿನಗುರುಗಳ, ಶಾಸನ ದೇವತೆಗಳ ಗುಣಗಾನವೇ ಮುಖ್ಯವಾಗಿರುತ್ತದೆ.

ಇಂತಹ ಭಕ್ತಿಗೀತೆಗಳೂ, ಸ್ತೋತ್ರ ರಚನೆಗಳೂ ಭಜನೆಗಳೂ ಜನಪದದಲ್ಲಿ ಹಲವಾರು ಇವೆ. ಇವುಗಳನ್ನು ಪೂರ್ವಾಚಾರ್ಯರೂ, ಪಂಡಿತರೂ, ಕವಿಗಳೂ, ಸಾಧು ಸಂತರೂ, ಭಕ್ತರೂ ರಚಿಸಿದ್ದಾರೆ. ಇವು ವಿವಿಧರೀತಿಯ ರಾಗ, ತಾಳ, ಛಂದಸ್ಸುಗಳಲ್ಲಿವೆ. ಇಂತಹ ರಚನೆಗಳು ಈಗಲೂ ಜೈನರಲ್ಲಿ ಸಾಹಿತ್ಯ ರೂಪದಲ್ಲಿ, ಗ್ರಂಥಗಳಲ್ಲಿ ವಿಪುಲವಾಗಿ ದೊರೆಯುತ್ತವೆ. ಇವೆಲ್ಲಾ ಅತ್ಯಂತ ಮಹತ್ವ ಪೂರ್ಣವಾಗಿವೆ. ಚಮತ್ಕಾರ ಪೂರ್ಣವಾಗಿವೆ. ಮಹಿಮಾಯುತವಾಗಿವೆ. ಆತ್ಮೋನ್ನತಿಕರವೂ, ಪುಣ್ಯದಾಯಕವೂ ಆಗಿವೆ.

ಎಲ್ಲಾ ಜೈನ ಶಾಸ್ತ್ರಗಳ ಆಗಮಗ್ರಂಥಗಳ ಪ್ರಾರಂಭದಲ್ಲಿ ಹೇಳಿರುವ ಮಂಗಳ ಗೀತೆಗಳು ಭಗವಂತನ ಸ್ತೋತ್ರಗಳೇ ಆಗಿವೆ. ಜಿನಾಗಮದ ಮೊದಲ ಗ್ರಂಥವಾದ

ಷಟ್‌ಖಂಡಾಗಮದ ಪ್ರಾರಂಭದಲ್ಲಿ ಆಚಾರ್ಯರು ಣಮೋಕಾರದೊಂದಿಗೆ ಪಂಚಪರಮೇಷ್ಠಿಗಳ ಸ್ತೋತ್ರ ಮಾಡಿದ್ದಾರೆ. ಹೀಗಾಗಿ ಎಲ್ಲಾ ಗ್ರಂಥಗಳ ಮಂಗಳಗೀತೆಗಳೂ ಸ್ತೋತ್ರ ರೂಪವೇ ಆಗಿ ಪ್ರಸಿದ್ಧವಾಗಿವೆ. ಕೆಲವರಂತೂ ಮೊದಲಿಗೆ ಪಂಚಪರಮೇಷ್ಠಿಗಳ ಗುಣಗಾನ ಮಾಡಿದ್ದಾರೆ.

ಜೈನ ಶ್ರಾವಕರು ಮಾಡುವ ಪೂಜೆ, ನೋಂಪಿ ಆರಾಧನೆ, ಆರತಿಗಳು ಸ್ತೋತ್ರಮಯವೇ ಆಗಿವೆ. ಜಿನಮುನಿಗಳು ಷಡಾವಶಕ ಕ್ರಿಯೆಗಳಲ್ಲಿ ಸ್ತವನವೆಂಬ ಒಂದು ಕ್ರಿಯೆಉಂಟು. ಅದು ಮುಖ್ಯವಾಗಿ ಭಗವಂತನ ಮತ್ತು ತಮ್ಮ ಗುರುಗಳ ಸ್ತೋತ್ರವೇ ಆಗಿದೆ. ಅವುಗಳಲ್ಲಿ ಮುಖ್ಯವಾಗಿ ದಶಭಕ್ತಿ ಚತುರ್ವಿಂಶತಿಸ್ತವನ, ಸಹಸ್ರನಾಮ, ನಿರ್ವಾಣಕಾಂಡ ಇತ್ಯಾದಿಯಾಗಿ ಪ್ರಸಿದ್ಧವಾಗಿವೆ.

ಜೈನರು ಯಾವಾಗಲೂ ಗುಣಾರಾಧಕರು. ಕೇವಲ ಮೂರ್ತಿ ಪೂಜಕರೇ ಅಲ್ಲ. ಅದೃಶ್ಯವಾಗಿರುವ ಜಿನೇಂದ್ರರ, ಸಿದ್ಧಾತ್ಮರ ಹಾಗೂ ಆತ್ಮನ ಸ್ವರೂಪ ವನ್ನು ಗುಣಗಳನ್ನು ಸ್ತುತಿ ಮಾಡುವ ವಾಡಿಕೆಯುಂಟು. ಪರೋಕ್ಷವಾದ ಅವು ಗಳ ಪರಿಚಯವನ್ನು ಮಾಡಿಕೊಳ್ಳಲು ಪ್ರತ್ಯಕ್ಷವಾದ ಅವರುಗಳ ಪ್ರತಿಕೃತಿಗಳಾದ ವೀತರಾಗೀ ಜಿನೇಂದ್ರರ ನಿರ್ವಿಕಾರ ನಿರಾಡಂಬರ ಮೂರ್ತಿಗಳ ದರ್ಶನ ಮಾಡಿ ಏಕಾಗ್ರತೆಯಿಂದ ಭಾವ ಭಕ್ತಿಯಿಂದ ಸ್ತುತಿ ಮಾಡಲಾಗುತ್ತಿದೆ. ಹಾಗಾಗಿ ಈ ಪ್ರತ್ಯಕ್ಷ ಪ್ರತಿಕೃತಿಗಳ ಸಾಕ್ಷಿಯಾಗಿಟ್ಟುಕೊಂಡು ಸ್ತೋತ್ರಗಳ ಮೂಲಕ ಪರೋಕ್ಷವಾದ ಪರಮಾತ್ಮನ ಪರಿಚಯ ಮಾಡಿಕೊಳ್ಳಲು, ತಾನೇ ಪರಮಾತ್ಮಪದವಿಗೆ ಕ್ರಮವಾಗಿ ನಿಯಮದಿಂದ ಏರಲು ಪ್ರಯತ್ನಿಸಲಾಗುತ್ತದೆ. ಆದ್ದರಿಂದ ಭಗವಂತನ ಗುಣಗಾನವನ್ನು ಸ್ತೋತ್ರದ ಮೂಲಕ ಮಾಡಲಾಗುತ್ತದೆ, ಸ್ಮರಿಸಲಾಗುತ್ತದೆ. ಇದರಿಂದ ಪರಿಣಾಮಶುದ್ಧಿಯೂ, ಸ್ವಾತ್ಮೋಪಲಬ್ಧಿಯೂ, ಪುಣ್ಯಪ್ರಾಪ್ತಿಯೂ, ಪಾಪನಾಶವೂ ಕಾರ್ಯಸಿದ್ಧಿಯೂ ಆಗುವುದು.

ಇಲ್ಲಿಯವರೆಗೆ ದೊರೆತ ಸಾಹಿತ್ಯಗಳಲ್ಲಿ ಷಟ್‌ಖಂಡಾಗಮವೇ ಅತ್ಯಂತ ಪ್ರಾಚೀನವಾದುದು. ಅದರಲ್ಲಿ ದೊರೆಯುವ ಣಮೋಕಾರವೇ ಮೊದಲ ಸ್ತೋತ್ರವೂ ಆಗಿದೆ. ಅನಂತರ ಇಲ್ಲಿಯವರೆಗೆ ರಚನೆಯಾದ ಜೈನ ವಾಙ್ಮಯದಲ್ಲಿ ವಿಪುಲವಾದ ಗ್ರಂಥರಚನೆಯು ನಾನಾ ಭಾಷೆಗಳಲ್ಲಿ ಆಗಿದೆ.

ರತ್ನಾಕರ ಕವಿಗಳು ಬರೆದಿರುವ ಭರತೇಶ ವೈಭವದ ಎಲ್ಲಾ ಸಂಧಿಗಳ ಮೊದಲ ಮತ್ತು ಕೊನೆಯ ಸ್ತುತಿ ಪದ್ಯಗಳ ಸಂಗ್ರಹವೇ ನಿರಂಜನ ಸ್ತುತಿ ಎಂಬ ಉತ್ತಮ ಸ್ತೋತ್ರವಾಗಿ ಬಹು ಜನಪ್ರಿಯವಾಗಿದೆ. ಇವರು ಸುಂದರವಾದ ಭಜನಾಗೀತೆಗಳನ್ನು



ಬರೆದಿದ್ದಾರೆ. ಹಾಗೆಯೇ ಬಹು ಹಿಂದೆ ಸಮಂತ ಭದ್ರಾ ಚಾರ್ಯರು ಗಂಧಹಸ್ತಿ ಮಹಾಭಾಷ್ಯವೆಂಬ ಬೃಹದ್ ಗ್ರಂಥದ ಪ್ರಾರಂಭದಲ್ಲಿ ಮಾಡಿರುವ ಸ್ತುತಿಯು ದೇವಾಗಮ ಸ್ತೋತ್ರವೆಂಬ ಪ್ರತ್ಯೇಕ ಸ್ತುತಿಗ್ರಂಥವೇ ಆಗಿ ಪ್ರಸಿದ್ಧವಾಗಿದೆ.

ಹೀಗೆ ಪ್ರತಿಭಾಶಾಲಿಗಳಾದ ಸ್ತೋತ್ರಕಾರರಿಂದ ರಚಿಸಲ್ಪಟ್ಟ ರಚನೆಗಳು ಹಲವಾರು ದೊರೆತಿವೆ. ಅವುಗಳಲ್ಲಿ ಮುಖ್ಯವಾಗಿ ಆಚಾರ್ಯ ಭದ್ರಬಾಹು ಗಳಿಂದ ರಚಿತವಾದ ಉವಸಗ್ಗಹರ ಸ್ತೋತ್ರವು ಪ್ರಾಕೃತ ಭಾಷೆಯಲ್ಲಿದೆ ಅನಂತರ ಕುಂದ ಕುಂದಾಚಾರ್ಯರು ಪ್ರಾಕೃತದಲ್ಲಿ ದಶಭಕ್ತಿ ಮುಂತಾದ ಸ್ತೋತ್ರರಚನೆ ಮಾಡಿದ್ದಾರೆ. ಸ್ವಾಮಿ ಸಮಂತ ಭದ್ರಾಚಾರ್ಯರೂ ಆಪ್ತ ಮೀಮಾಂಸ, ಯುಕ್ತ್ಯಾನುಶಾಸನ, ಸ್ತುತಿವಿದ್ಯಾ, ಬೃಹದ್ ಸ್ವಯಂಭೂ ಸ್ತೋತ್ರ ಮುಂತಾದವುಗಳನ್ನು ರಚಿಸಿದ್ದಾರೆ. ಸಿದ್ಧಸೇನದಿವಾಕರರೂ ದ್ವಾತ್ರಿಂಶತಿಕಾ ಎಂಬ ಸ್ತೋತ್ರ ರಚಿಸಿದ್ದಾರೆ. ಪೂಜ್ಯಪಾದರ ದಶಭಕ್ತಿ ಅತ್ಯಂತ ಪ್ರಮುಖವಾದ ಸ್ತೋತ್ರಗ್ರಂಥವಾಗಿದೆ.

ಜೈನಸಾಹಿತ್ಯದಲ್ಲಿ ಪ್ರಾಕೃತ, ಅಪಭ್ರಂಶ, ಸಂಸ್ಕೃತ, ಮರಾಠಿ, ಕನ್ನಡ ಹಿಂದೀ ಮುಂತಾದ ಹಲವು ಭಾಷೆಗಳಲ್ಲಿ ಹಲವು ದೇಶಭಾಷೆಗಳಲ್ಲಿ ಸ್ತೋತ್ರ ರಚನೆಗಳು ದೊರೆಯುತ್ತವೆ.

ಸ್ತೋತ್ರದಲ್ಲಿ ಭಕ್ತಿಯೇ ಪ್ರಧಾನವಾದುದು, ಭಕ್ತಿಯಲ್ಲಿ ಅಪೂರ್ವವಾದ ಶಕ್ತಿ ಇದೆ. ಇದು ಮುಕ್ತಿಗೆ ಸಾಧನಕರವಾಗಿದೆ. ಮುಕ್ತಿಗೆ ಅಡ್ಡವಾದುದು ಮೋಹ. ಮೋಹದ ಕ್ಷಯವೇ ಮೋಕ್ಷ. ಈ ಮೋಹವನ್ನು ನಾಶ ಮಾಡುವ ಶಕ್ತಿ ಭಕ್ತಿಯಲ್ಲಿದೆ. ಇಂತಹ ಭಕ್ತಿಗೆ ಸ್ತುತಿ, ಸ್ತೋತ್ರಗಳೇ ಆಧಾರ. ಇದಕ್ಕೆ ಬೇಕಾದ ಹಲವು ಉತ್ತಮವಾದ ಸ್ತೋತ್ರಗಳು ದೊರೆತಿವೆಯಾದರೂ ಕೆಲವು ರಚನಾಕಾರರ ಹೆಸರೂ, ಕಾಲ ಗೊತ್ತಾಗಿಲ್ಲ. ಮತ್ತೆ ಕೆಲವು ಸ್ತೋತ್ರಗಳ ಹೆಸರುಗಳು ಗ್ರಂಥಾಂತರ ಗಳಲ್ಲಿ ಸುಳಿವು ಸಿಕ್ಕರೂ ಅವು ದೊರೆತಿಲ್ಲ, ಮತ್ತೆ ಕೆಲವು ಇನ್ನೂ ಶಿಲಾಶಾಸನ, ತಾಮ್ರಪತ್ರ ಓಲೆ ಗರಿಗ್ರಂಥಗಳಲ್ಲಿಯೇ ಉಳಿದಿವೆ.

ಪ್ರತಿಶಾಸನದ ಪ್ರಾರಂಭದಲ್ಲಿಯೂ ದೊರೆಯುವ ಸ್ತುತಿಯೊಂದು ಬಹು ಪ್ರಸಿದ್ಧವಾಗಿದೆ.

ಶ್ರೀಮತ್ಪರಮ ಗಂಭೀರ ಸ್ಯಾದ್ವಾದಾಮೋಘ ಲಾಂಛನಂ।
ಜೀಯಾತ್ ತ್ರೈಲೋಕ್ಯನಾಥಸ್ಯ ಶಾಸನಂ ಜಿನಶಾಸನಂ ॥

ಭಗವಾನ್ ಬಾಹುಬಲಿ ಸ್ವಾಮಿಯವರ ಹಲವಾರು ಸ್ತುತಿಗಳಿವೆ. ಅವುಗಳಲ್ಲಿ ಕೆಲವಂತು ಸುಂದರವಾಗಿವೆ. ಅವುಗಳ ರಚನಾಕಾರರಾರೆಂಬುದೇ ಗೊತ್ತಾಗಿಲ್ಲ.

ಕನ್ನಡದಲ್ಲಿ ರತ್ನಾಕರ ಕವಿಗಳು ಆದಿನಾಥರ ಸ್ತುತಿಯನ್ನು ಎಷ್ಟು ಭಾವಭಕ್ತಿಯಿಂದ ಮಾಡಿದ್ದಾರೆಂದರೆ ಅದರ ಬಲದಿಂದ ನಿರಾತಂಕವಾಗಿ ಭರತೇಶ ವೈಭವವೆಂಬ ಬೃಹದ್‌ಗ್ರಂಥ ರಚಿಸಿ ಪ್ರಸಿದ್ಧರಾದರು.

ಪರಮಪರಂಜ್ಯೋತಿ ಕೋಟಿ ಚಂದ್ರಾದಿತ್ಯಕಿರಣ ಸುಜ್ಞಾನ ಪ್ರಕಾಶ ।
ಸುರರ ಮುಕುಟ ಮಣಿರಂಜಿತ ಚರಣಾಬ್ಜ ಶರಣಾಗುಪ್ರಥಮ ಜಿನೇಶಾ॥

ಹೀಗೆ ಅಮಿತಿ ಗತ್ಯಾಚಾರ್ಯರು ತಮ್ಮ ಸಾಮಾಯಿಕ ಪಾಠದಲ್ಲಿ ಅತ್ಯಂತ ಸುಂದರವಾದ ಜನಪ್ರಿಯವಾದ ಮಂಗಲಸ್ತುತಿ ಮಾಡಿದ್ದಾರೆ.

ಸತ್ವೇಷು ಮೈತ್ರೀಂ ಗುಣಿಷುಪ್ರಮೋದಂ ।
ಕ್ಲಿಷ್ಟೇಷಜೀವೇಷು ಕೃಪಾಪರತ್ವಂ ।
ಮಾಧ್ಯಸ್ಥಭಾವಂ ವಿಪರೀತವೃತೌ ।
ಸದಾಮಮಾತ್ಮಾ ವಿದಧಾತುದೇವಾ ॥

ಇಂತಹ ಹಲವಾರು ಸ್ತೋತ್ರಗಳು ಸಾಹಿತ್ಯದಲ್ಲಿ ಇವೆ.

ಇಲ್ಲಿ ಕೆಲವು ಪ್ರಮುಖವಾದ ಸ್ತೋತ್ರಗ್ರಂಥಗಳ ರಚನಾಕಾರರ ರಚನೆಗಳನ್ನು ಕಾಲಾನುಕ್ರಮವಾಗಿ ಸಂಗ್ರಹಿಸಿ ತಿಳಿಸಲಾಗಿದೆ. ಕೆಲವರ ಕಾಲ ನಿಖರವಾಗಿಲ್ಲ. ಸುಮಾರು ಎಂದು ಹೇಳಲಾಗಿದೆ.

| ರಚನಾಕಾರರು | ಕಾಲ(ಸುಮಾರು) | ಗ್ರಂಥದ ಹೆಸರು |
|---|---|---|
| ಭದ್ರಬಾಹು ಆಚಾರ್ಯರು | 1ನೇ ಶತಮಾನದ ಆದಿಭಾಗ | ಉವಸಗ್ಗ ಹರತ್ತು ಇ. |
| ಕುಂದಕುಂದಾಚಾರ್ಯರು | 1ನೇ ಶತಮಾನ | ತಿತ್ಥಯರ ಥುಇ. ಪ್ರಾಕೃತ ಸಿದ್ಧಭಕ್ತಿ ಮುಂತಾದ ದಶಭಕ್ತಿ |
| ಸ್ವಾಮಿ ಸಮಂತಭದ್ರಾಚಾರ್ಯರು | 1ನೇ ಶತಮಾನದ ಕೊನೆಯಭಾಗ | ಸ್ವಯಂಭೂ ಸ್ತೋತ್ರ, ಸ್ತುತಿವಿದ್ಯಾ, ದೇವಾಗಮ ಸ್ತೋತ್ರ |
| ಆಚಾರ್ಯ ಮಾನದೇವರು | 3ನೇ ಶತಮಾನ | ಶಾಂತಿಸ್ತವ |
| ಸಿದ್ಧಸೇನದಿವಾಕರರು | 3ನೇ ಶತಮಾನ | ದ್ವಾತ್ರಿಂಶತಿಕಾ |
| ಪೂಜ್ಯಪಾದರು | 6ನೇ ಶತಮಾನ | ಶಾಂತ್ಯಾಷ್ಟಕಾದಿ ದಶಭಕ್ತಿ; ಜಿನಾಭಿಷೇಕ |
| ವಜ್ರನಂದಿಗಳು | 6ನೇ ಶತಮಾನ | ನವ ಸ್ತೋತ್ರ |
| ಆಚಾರ್ಯ ಪಾತ್ರಕೇಸರಿಗಳು | 7ನೇ ಶತಮಾನ | ಪಾತ್ರಕೇಸರಿ ಸ್ತೋತ್ರ |
| ಆಚಾರ್ಯ ಮಾನತುಂಗರು | 7ನೇ ಶತಮಾನ | ಭಕ್ತಾಮರ ಸ್ತೋತ್ರ |
| ಭಟ್ಟಾಕಲಂಕರು | 7ನೇ ಶತಮಾನ | ಅಕಲಂಕ ಸ್ತೋತ್ರ |
| ಆಚಾರ್ಯಜಯಸೇನರು | 7ನೇ ಶತಮಾನ | ಜಿನೇಂದ್ರ ಗುಣಸಂಸ್ತುತಿ |
| ಧನಂಜಯ ಕವಿ | 7ನೇ ಶತಮಾನ | ವಿಷಪಹಾರ ಸ್ತೋತ್ರ |



| | | |
|---|---|---|
| ಬಪ್ಪಭಟ್ಟಿ | 8ನೇ ಶತಮಾನ | ಚತುರ್ವಿಂಶತಿ ಸ್ತುತಿ, ಸರಸ್ವತೀ ಸ್ತೋತ್ರ |
| ಆಚಾರ್ಯವಿದ್ಯಾನಂದರು | 8ನೇ ಶತಮಾನ | ಪಾರ್ಶ್ವನಾಥಸ್ತೋತ್ರ |
| ಆಚಾರ್ಯಜಿನಸೇನರು | 9ನೇ ಶತಮಾನ | ಜಿನಸಹಸ್ರನಾಮ |
| ಆ॥ ನಂದಿಷೇಣರು | 9ನೇ ಶತಮಾನ | ಅಜಿತಶಾಂತಿ ಸ್ತವನ |
| ಜಂಬೂಸೂರಿಗಳು | ಕ್ರಿ.ಶ.882 | ಜಿನಶತಕ |
| ಪೊನ್ನಕವಿ | 894 | ಜಿನಾಕ್ಷರಮಾಲೆ |
| ಪುಷ್ಪದಂತಮುನಿಗಳು | 895 | ಜಿನಮಹಿಮ್ನಾಸ್ತೋತ್ರ |
| ಧನಂಜಯಕವಿ | 895 | ವಿಷಾಪಹಾರಸ್ತೋತ್ರ |
| ಭೂಪಾಲಕವಿ | 895 | ಭೂಪಾಲ ಸ್ತೋತ್ರ |
| ನೇಮಿಚಂದ್ರಾಚಾರ್ಯರು | 960 | ಗೊಮ್ಮಟಸ್ತುತಿ |
| ಶೋಭನಾಮುನಿ | 970 | ಶೋಭನಾಸ್ತುತಿ |
| ಧನಪಾಲಕಾಶ್ಯಪ | 970 | ವೃಷಭಪಂಚಾಸಿಕ |
| ಆ॥ ಅಮಿತಗತಿ | 975 | ಭಾವನಾದ್ವಾತ್ರಿಂಶತಿಕಾ |
| ವಾದಿರಾಜರು | 1025 | ಏಕೀಭಾವಸ್ತೋತ್ರ, ಜ್ಞಾನಲೋಚನಸ್ತೋತ್ರ, ಕಲ್ಯಾಣಕಲ್ಪಧ್ರುಮ, ಅಧ್ಯಾತ್ಮಾಷ್ಟಕ |
| ಧಾಮನಂದಿ | 1025 | ಜಿನಶತಕ |
| ಮಲ್ಲಿಷೇಣ | 1047 | ಋಷಿಮಂಡಲ ಸ್ತೋತ್ರ, ಪದ್ಮಾವತೀ ಸ್ತೋತ್ರ |
| ಇಂದ್ರನಂದಿ | 1050 | ಪಾರ್ಶ್ವನಾಥ ಸ್ತೋತ್ರ |
| ಮಾಘನಂದಿಮುನಿ | 1100 | ಅರ್ಹನ್ಸ್ತುತಿ ಮಾಲಾ, ಚತುರ್ವಿಂಶತಿ ಸ್ತುತಿ |
| ಹೇಮ ಚಂದ್ರಾಚಾರ್ಯರು | 1109 | ವೀತರಾಗಸ್ತೋತ್ರ, ಮಹಾವೀರ ಸ್ತೋತ್ರ, ದ್ವಾತ್ರಿಂಶತಿಕಾ |
| ಜಿನಬ್ರಹ್ಮ ಸೂರಿ | 1100 | ಅಜಿತಶಾಂತಿಲಘುಸ್ತವನ, ಭವನಿವಾರಣಾಸ್ತೋತ್ರ, ವೀರಸ್ತವ, ಜಿನಕಲ್ಯಾಣ ಸ್ತೋತ್ರ |
| ಮುನಿಚಂದ್ರಸೂರಿ | 1111 | ಪ್ರಭಾತಿಕಸ್ತುತಿ |
| ಮೌಕ್ತಿಕ | 1120 | ಚಂದ್ರನಾಥಾಷ್ಟಕ |
| ಬ್ರಹ್ಮಶಿವ | 1125 | ತ್ರೈಲೋಕಚೂಡಾಮಣಿ |
| ಜಿನದತ್ತಸೂರಿ | 1125 | ಸಾರ್ಥಾಧಿಷ್ಠಾಯಿಸ್ತೋತ್ರ, ವಿಘ್ನವಿನಾಶಿನೀಸ್ತೋತ್ರ |
| ಧರ್ಮಘೋಷಸೂರಿ | 1125 | ಋಷಿಮಂಡಲಸ್ತೋತ್ರ |
| ಕುಮುದಚಂದ್ರಾಚಾರ್ಯರು | 1125 | ಕಲ್ಯಾಣಮಂದಿರಸ್ತೋತ್ರ |
| ಭಾನುಕೀರ್ತಿಗಳು | 1139 | ಶಂಖದೇವಾಷ್ಟಕ |
| ರಾಜಸೇನರು | 1150 | ಪಾರ್ಶ್ವನಾಥಾಷ್ಟಕ |
| ವಿಷ್ಣುಸೇನ | 1150 | ಸಮವಸರಣ ಸ್ತೋತ್ರ |

| | | |
|---|---|---|
| ಶ್ರೀಪಾಲಕವಿ | 1152 | ಶತಾರ್ಥಿ |
| ಪದ್ಮಪ್ರಭಮಲಧಾರಿದೇವ | 1162 | ಪಾರ್ಶ್ವನಾಥಸ್ತೋತ್ರ |
| | | ಲಕ್ಷ್ಮೀಸ್ತೋತ್ರ |
| ರಾಮಚಂದ್ರಸೂರಿ | 1175 | ಷೋಡಶಸ್ತವನ, ಆದಿನಾಥಸ್ತೋತ್ರ |
| ವಿದ್ಯಾನಂದಿ | 1181 | ಪಾರ್ಶ್ವನಾಥ ಸ್ತೋತ್ರ |
| ಸಿದ್ಧಸೇನರು | 1200 | ಶಕ್ರಸ್ತವನ |
| ಶುಭಚಂದ್ರಯೋಗಿ | 1200 | ಜಿನಪತಿಸ್ತವನ |
| ವಾದಿರಾಜದ್ವಿತೀಯ | 1200 | ನವಗ್ರಹಸ್ತೋತ್ರ |
| ವರ್ಧಮಾನ ಮುನಿ | 1200 | ಷಡ್‌ಭಾಷಾ ಪಾರ್ಶ್ವನಾಥಸ್ತುತಿ |
| ಹಸ್ತಿಮಲ್ಲ | 1200 | ಸಮವಸರಣ ಸ್ತೋತ್ರ |
| ಆಶಾಧರರು | 1200 | ಸಹಸ್ರನಾಮಸ್ತವ |
| | | ಸಿದ್ಧಗುಣಸ್ತೋತ್ರ |
| | | ಸರಸ್ವತೀ ಸ್ತೋತ್ರ |
| | | ಮಹಾವೀರಸ್ತುತಿ |
| ಸೋಮದೇವ | 1205 | ಚಿಂತಾಮಣಿಸ್ತವನ |
| ದೇವನಂದಿ | 1225 | ಸಿದ್ಧಿಪ್ರಿಯಸ್ತೋತ್ರ |
| | | ಸ್ವಯಂಭೂಲಘುಪಾಠ |
| | | ಚತುರ್ವಿಂಶತಿಸ್ತವನಲಘು |
| ಗುಣವರ್ಮ | 1235 | ಚಂದ್ರನಾಥಷ್ಟಕ |
| ಪದ್ಮಪ್ರಭ | 1237 | ಪಾರ್ಶ್ವಸ್ತುತಿ, ಭುವನದೀಪಿಕಾ |
| ವಾಗ್ಭಟ್ಟ | 1250 | ಸುಪ್ರಬೋಧನ ಸ್ತೋತ್ರ |
| ಚಾರುಕೀರ್ತಿಗಳು | 1250 | ಗೀತವೀತರಾಗ |
| ಜಿನಪ್ರಭಸೂರಿ | 1295 | ಪಂಚಸ್ತೋತ್ರ |
| ಧರ್ಮಘೋಷ | 1300 | ಜಿನಚತುರ್ವಿಂಶತಿಕಾ |
| ಶುಭಚಂದ್ರ ಅಧ್ಯಾತ್ಮ | 1313 | ಮದಾಲಸಸ್ತೋತ್ರ |
| ಜಿನಪದ್ಮ | 1235 | ಶಾಂತಿನಾಥಾಷ್ಟಕ |
| ರತ್ನಾಕರವರ್ಣಿ | 1457 | ನಿರಂಜನಸ್ತುತಿ, ಜಿನಭಜನೆಗಳು |
| ಮುನಿಸುಂದರ | 1379 | ಜಿನಸ್ತೋತ್ರಕೋಶ |
| ಮೇರುವಿಜಯ | 1500 | ಚತುರ್ವಿಂಶತಿ ಸ್ತುತಿ |
| ಭಾಗೇಂದು ಕವಿ | 1900 | ಮಹಾವೀರಾಷ್ಟಕ |
| ಬೊಪ್ಪಣಕವಿ | | ಬಾಹುಬಲಿಸ್ತುತಿ |

ಹಲವಾರು ಪಂಡಿತರು-ಕವಿಗಳು ಬಾಹುಬಲಿಸ್ತುತಿಗಳನ್ನು ರಚಿಸಿದ್ದಾರೆ.

ಹೀಗೆ ಇನ್ನೂ ಮುಂತಾದ ಹಲವು ಮಂದಿ ಆಚಾರ್ಯರೂ, ಕವಿಗಳೂ, ಪಂಡಿತರೂ ಜಿನಸ್ತುತಿ, ಭಕ್ತಿಗೀತೆಗಳನ್ನು ರಚಿಸಿದ್ದಾರೆ. ಹೀಗಾಗಿ ಸ್ತೋತ್ರ ಸಾಹಿತ್ಯ ವಿಪುಲವಾಗಿದೆ. ಕವಿಗಳಾರೆಂದು ಗೊತ್ತಿಲ್ಲದ ಹಲವು ಸ್ತೋತ್ರಗಳಿವೆ. ಸುಪ್ರಭಾತ ಸ್ತೋತ್ರ, ದೃಷ್ಟಾಷ್ಟಕ, ವೀತರಾಗಸ್ತೋತ್ರ, ಪರಮಾನಂದ ಸ್ತೋತ್ರ, ಚೈತ್ಯವಂದನಾಸ್ತುತಿ, ಪಂಚಪರಮೇಷ್ಠಿ ಸ್ತುತಿ ಮಹಿಮೆ, ಸರಸ್ವತಿ ಸ್ತೋತ್ರ,



ಜಿನಭಕ್ತಿಗೀತೆಗಳು, ಪೂಜಾಷ್ಟಕಗಳು, ಭಜನೆಗಳು, ಯಕ್ಷ ಯಕ್ಷಿಯ ಸ್ತುತಿಗಳೂ ಹಲವು ಇವೆ. ಸ್ತೋತ್ರಗಳಲ್ಲಿ ಹೆಚ್ಚಾಗಿ ಪಾರ್ಶ್ವನಾಥ ಸ್ತುತಿ, ಶಾಂತಿನಾಥಸ್ತುತಿ. ಚತುರ್ವಿಂಶತಿ ತೀರ್ಥಂಕರರ ಸ್ತುತಿಗಳೇ ಹೆಚ್ಚು.

ಈ ಸ್ತುತಿಸಾಹಿತ್ಯವನ್ನು ಅವಲೋಕನ ಮಾಡಿದಾಗ ಇವು ಕೇವಲ ಸ್ತೋತ್ರ ರಚನೆಯೇ ಆಗಿರದೆ ಇವುಗಳಲ್ಲಿ ಕಾವ್ಯ ನಿಯಮ, ಆಧ್ಯಾತ್ಮಿಕತೆ, ನೀತಿ ಬೋಧನೆ, ದಾರ್ಶನಿಕತೆ ಮೊದಲಾದುವೆಲ್ಲಾ ಅಡಕವಾಗಿವೆ. ಸಾಹಿತ್ಯಪರಿಕರವನ್ನು ಹೊಂದಿವೆ. ಈ ಸ್ತೋತ್ರಗಳಲ್ಲಿ ಕೆಲವು ಮಂತ್ರ ಸಹಿತವಾಗಿಯೂ ಇವೆ. ಕೆಲವು ಕಥಾ ಸೂಚಕವಾಗಿಯೂ ಇವೆ. ಕೆಲವಂತೂ ಮಹಿಮಾಮಯವಾಗಿವೆ. ಅವುಗಳಲ್ಲಿ ಮುಖ್ಯವಾಗಿ ಪೂಜ್ಯಪಾದರ ಶಾಂತ್ಯಾಷ್ಟಕ, ಸಮಂತಭದ್ರರ ಸ್ವಯಂ ಭೂಸ್ತೋತ್ರ, ಮಾನತುಂಗರ ಭಕ್ತಾಮರ, ಸಿದ್ಧ ಸೇನರ ಮಹಾವೀರಸ್ತುತಿ, ಪಾತ್ರಕೇಸರಿಗಳ ಪಾರ್ಶ್ವನಾಥಸ್ತೋತ್ರ, ಧನಂಜಯ ಕವಿಯ ವಿಷಾಪಹಾರ ಸ್ತೋತ್ರ, ವಾದಿರಾಜರ ಏಕೀಭಾವ, ಮಲ್ಲಿಷೇಣರ ಋಷಿಮಂಡಲ, ಕುಮುದ ಚಂದ್ರಾಚಾರ್ಯರ ಕಲ್ಯಾಣಮಂದಿರ ಮುಂತಾದವು ಪವಾಡದ ಸದೃಶವಾದ ಮಹಿಮೆಯುಳ್ಳವುಗಳಾಗಿವೆ. ಇವುಗಳಲ್ಲಿ ಭಕ್ತಾಮರ, ಕಲ್ಯಾಣಮಂದಿರ, ಏಕೀಭಾವ, ವಿಷಾಪಹಾರ, ಭೂಪಾಲಸ್ತೋತ್ರ ಎಂಬುವು ಪಂಚಸ್ತೋತ್ರ ಗಳೆಂದೇ ಪ್ರಸಿದ್ಧವೂ ಜನಪ್ರಿಯವೂ ಆಗಿವೆ.

ಜೈನ ಸ್ತೋತ್ರ ಸಾಹಿತ್ಯವು ಭವ್ಯತೆಯಲ್ಲಿ ಭಾವುಕತೆಯಲ್ಲಿಯೂ ನಾದಮಯವೂ, ಇಂಪಾಗಿ ಹಾಡುವಂತೆಯೂ ಇವೆ. ಇವುಗಳನ್ನು ಪೌರಾತ್ಯರೂ, ಪಾಶ್ಚಿಮಾತ್ಯರೂ ಪ್ರಶಂಸಿಸಿದ್ದಾರೆ.

ಈ ಸ್ತೋತ್ರ ಸಾಹಿತ್ಯವನ್ನು ಕಾಲಾನುಕ್ರಮವಾಗಿ ವಿಂಗಡಿಸಿ ವಿಭಜನೆ ಮಾಡಿದಾಗ ಆದಿಕಾಲ, ಮಧ್ಯಕಾಲ ಮತ್ತು ಇತ್ತೀಚಿನ ಕಾಲ (ಆಧುನಿಕಕಾಲ)

ಆದಿಕಾಲ - ಆಚಾರ್ಯಕುಂದುಕುಂದರೂ ಮತ್ತು ಅವರ ಹಿಂದಿನ ಕಾಲದ ಸ್ತೋತ್ರಗಳು.

ಮಧ್ಯಕಾಲ - ಇಸಿವೀ 100 ರಿಂದ 800 ರವರೆಗಿನ ಸ್ತೋತ್ರಗಳು.

ಇತ್ತೀಚಿನಕಾಲ - 800 ರಿಂದ ಇಂದಿನವರೆಗೆ ಸ್ತೋತ್ರ ರಚನೆಗಳು.

ಸ್ತೋತ್ರಗಳ ಭಾಷೆ - ಈ ಸ್ತೋತ್ರಗಳು ಹೆಚ್ಚಾಗಿ ಸಂಸ್ಕೃತ ಭಾಷೆಯಲ್ಲಿವೆ. ಆದರೂ ಪ್ರಾಕೃತ, ಕನ್ನಡ, ಹಿಂದಿ, ಮರಾಠಿ, ಗುಜರಾತಿ ಭಾಷೆಗಳಲ್ಲಿಯೂ

ಹೆಚ್ಚಾಗಿವೆ. ಹಾಗೂ ಎಲ್ಲಾ ದೇಶೀಯ ಭಾಷೆಗಳಲ್ಲೂ ಸ್ತೋತ್ರ ಸಾಹಿತ್ಯವಿದೆ.

ಈ ಸ್ತೋತ್ರಗಳಲ್ಲಿ ತೀರ್ಥಂಕರರುಗಳ ಜೀವನ, ಗುಣಗಾನ ಪಂಚಕಲ್ಯಾಣಗಳ ವಿವರ, ಭಾವಾವಳಿ, ಉಪದೇಶ, ಆಧ್ಯಾತ್ಮಕತೆ ನ್ಯಾಯ ನೀತಿಗಳ ವಿವೇಚನೆ, ಸಿದ್ಧಾಂತ, ಧರ್ಮ, ಸಾಮಾಜಿಕ ಸ್ಥಿತಿ ರಾಜನೀತಿ, ಆಚಾರವಿಚಾರಗಳಲ್ಲಿ ಇರುವುದು ಕಂಡುಬರುವುದು.

ಸ್ವಾಮಿ ಸಮಂತಭದ್ರಾಚಾರ್ಯರು ಶ್ರೀ ವೀರ ಜಿನೇಂದ್ರರ ಸ್ತೋತ್ರ ಮಾಡುತ್ತಾ 'ಹೇ ವೀರ ಜಿನೇಂದ್ರರೇ ತಾವು ಕರ್ಮರೂಪೀ ಶತ್ರುಗಳ ಸೇನೆಯನ್ನು ತಪೋರೂಪೀ ಶಕ್ತಿಯಿಂದ ಸೋಲಿಸಿ ನಿಜವಾದ ಮಹಾವೀರರೇ ಆಗಿದ್ದೀರಿ. ಈ ಸಂಸಾರ ಸಾಗರದಿಂದ ಪಾರಾಗಿ ಮಹಾವೀರರಾಗಿದ್ದೀರಿ, ದೇವೇಂದ್ರ, ನರೇಂದ್ರ, ನಾಗೇಂದ್ರ, ಮುನೀಂದ್ರರಿಂದ ಪೂಜ್ಯರಾಗಿದ್ದೀರಿ. ತಮ್ಮ ಧರ್ಮೋಪದೇಶದಲ್ಲಿ ತಾವು ತೋರಿರುವ ಪ್ರಶಸ್ತವಾದ ಮಾರ್ಗದಲ್ಲಿ ನಾವೂ ನಿರಂತರವಾಗಿ ಸಾಗಿ ತಮ್ಮತ್ತ ಬರುತ್ತಿದ್ದೇವೆ. ತಾವು ತೋರಿರುವ ಮಾರ್ಗ ಆತ್ಮಕಲ್ಯಾಣಕಾರಿಯಾದುದು. ಈ ಉಪಕಾರಮಾಡಿದ ತಮ್ಮ ಉದಾರ ಗುಣಗಳನ್ನು ಭಕ್ತಿಯಿಂದ ಕೊಂಡಾಡಿ ಸ್ತುತಿಸುವುದೇ ನಮಗೆ ಆ ನಿಮ್ಮ ಮಾರ್ಗದಲ್ಲಿ ಸಾಗುವುದಕ್ಕೆ ಶಕ್ತಿಯಾಗಿದೆ. ಇದೇ ನಮ್ಮ ಮೋಕ್ಷದ ಯುಕ್ತಿಯಾಗಲಿ ಎಂದು ಪ್ರಾರ್ಥಿಸುತ್ತೇನೆ' ಎಂದು ಆಚಾರ್ಯರು ಭಕ್ತಿಯಿಂದ ಭಾವಪರವಶರಾಗಿ ಹಾಡಿ ಸ್ತುತಿಸಿದ್ದಾರೆ. ಆದರಿಂದ ತಾವೂ ಭವಿಷ್ಯತ್‌ಕಾಲದ ತೀರ್ಥಂಕರರಾಗುವ ಪದವಿಗೆ ಪಾತ್ರರಾದರು. ಅಂದಮೇಲೆ ಇದಕ್ಕಿಂತ ಮಿಗಿಲಾದ ಫಲ ಮತ್ತೇನು ಬೇಕು?

ಹೀಗೆ ಸ್ತೋತ್ರದಿಂದ ಅಚಿಂತ್ಯವಾದ ಶಕ್ತಿ, ಫಲ, ಸಂಪದ ದೊರೆಯುವುದು. ಸ್ತೋತ್ರ ಮಾಡುವುದರಿಂದ ಅಂತರಂಗ ಶುದ್ಧಿಯಾಗುವುದು, ಪಾಪ ವಿಮೋಚನೆ, ಭಯ, ರೋಗ ಹರವಾಗುವುದು, ಪುಣ್ಯಲಾಭವಾಗುವುದು.

ಸ್ತೋತ್ರಗಳಲ್ಲಿ ಕಾವ್ಯ, ಛಂದಸ್ಸು, ಅಲಂಕಾರ, ರಸ, ಅಪೂರ್ವ ಶಬ್ದ ಜೋಡಣೆ, ಉತ್ತಮ ಶೈಲಿ, ಲಯ, ತಾನ, ಮುಂತಾದವು ಶಾಸ್ತ್ರೀಯವಾಗಿ ನಿಬದ್ಧವಾಗಿರುತ್ತವೆ.

ಹೀಗೆ ಸ್ತೋತ್ರಗಳ ರಚನೆ ಮಾಡಿದ ಪೂರ್ವಾಚಾರ್ಯರೂ ಪಂಡಿತರೂ, ಕವಿಗಳೂ, ಭಾರತೀಯ ಸಂಸ್ಕೃತಿಗೆ, ಸಾಹಿತ್ಯಕ್ಕೆ, ಆಧ್ಯಾತ್ಮಿಕಕ್ಕೆ ಧಾರ್ಮಿಕಕ್ಷೇತ್ರಕ್ಕೆ ಅಮೂಲ್ಯವಾದ ಕೊಡುಗೆಯನ್ನು ನೀಡಿ ಗೌರವಕ್ಕೆ ಪಾತ್ರರಾಗಿದ್ದಾರೆ.



# 83. ಗುಣಸ್ಥಾನ ವಿವೇಚನೆ

ಜಗತ್ತಿನಲ್ಲಿ ಅನಂತಾನಂತ ಜೀವಿಗಳಿವೆ. ಅವೆಲ್ಲಾ ಪ್ರತ್ಯೇಕವಾದ ಸ್ವಯಂ ಸ್ವತಂತ್ರವಾದ ಅಸ್ತಿತ್ವ ಉಳ್ಳವುಗಳಾಗಿವೆ. ಅವುಗಳನ್ನು ಸೃಷ್ಟಿ ಮಾಡುವವರೂ, ಸಲಹುವವರೂ, ನಾಶ ಮಾಡುವವರೂ ಯಾರೂ ಇಲ್ಲ. ಇವೆಲ್ಲಾ ತಮ್ಮ ತಮ್ಮ ಕರ್ಮಾನುಸಾರ ನಾಲ್ಕು ಗತಿಗಳಲ್ಲಿ ಜನ್ಮ ಮರಣವನ್ನು ಹೊಂದುತ್ತವೆ. ಸುಖ ದುಃಖವನ್ನು ಅನುಭವಿಸುತ್ತವೆ. ಈ ಕರ್ಮದಿಂದ ಬಿಡುಗಡೆ ಹೊಂದಿದರೆ ಮೋಕ್ಷದಲ್ಲಿ ಶಾಶ್ವತವಾಗಿ ನೆಲೆಗೊಳ್ಳುತ್ತವೆ.

ಜೀವಿಗಳು ದೇವಗತಿ, ಮನುಷ್ಯಗತಿ, ತಿರ್ಯಂಚಗತಿ ಮತ್ತು ನರಕಗತಿ ಎಂದು ನಾಲ್ಕು ಗತಿಗಳಲ್ಲಿ ಜನ್ಮ ಮರಣ ಹೊಂದುತ್ತವೆ. ಈ ಗತಿಚಕ್ರದಿಂದ ಬಿಡುಗಡೆ ಹೊಂದಿದ ಪವಿತ್ರಾತ್ಮವೇ ಸಿದ್ಧಾತ್ಮ. ಅದು ಅತ್ಯಂತ ಶುದ್ಧ ನಿರ್ಮಲ ನಿತ್ಯ ನಿರಂಜನ ಸ್ವರೂಪವಾಗಿ ಶಾಶ್ವತವಾದ ಅಲೌಕಿಕವಾದ ಆತ್ಮಸುಖದಲ್ಲಿ ಸದಾ ಓಲಾಡುತ್ತಿರುತ್ತದೆ. ಇದು ಪೂರ್ಣವಿಕಸಿತವಾದ ಆತ್ಮಸ್ಥಿತಿ. ಮೋಹದಿಂದ, ಕಷಾಯದಿಂದ, ಮನ, ವಚನ, ಕಾಯದ ಕಾರ್ಯಗಳ ಪ್ರವೃತ್ತಿಯ ಕಾರಣದಿಂದ ಜೀವದ ಅಂತರಂಗದಲ್ಲಿ ಪರಿಣಾಮಗಳ ಏರಿಳಿಕೆಯಾಗುತ್ತಿರುತ್ತವೆ. ಇವನ್ನೇ ಗುಣಸ್ಥಾನವೆನ್ನುತ್ತಾರೆ. ಹೀಗೆ ಆತ್ಮನು ವಿಕಾಸ ಹೊಂದುವ ಹಂತಗಳು ಕನಿಷ್ಠದಿಂದ ಹಿಡಿದು ಉತ್ಕೃಷ್ಟದವರೆಗೆ, ಹೀನಸ್ಥಿತಿಯಿಂದ ಉತ್ತಮ ಸ್ಥಿತಿಯವರೆಗೆ ಏರುವ ಅಂತಸ್ತುಗಳೇ ಗುಣಸ್ಥಾನಗಳು. ಇವು ಆತ್ಮನ ಗುಣಗಳ ವಿಕಾಸವಾಗುವುದನ್ನು ತಿಳಿಸಿ ಕೊನೆಗೆ ಪೂರ್ಣ ವಿಕಾಸವು ಎಲ್ಲಿ ಹೇಗೆ ಎಂಬುದನ್ನು ತೋರಿಸುತ್ತದೆ. ವಿಕಾಸದ ದೃಷ್ಟಿಯಿಂದ ಆತ್ಮರಲ್ಲಿ ಬಹಿರಾತ್ಮ, ಅಂತರಾತ್ಮ ಮತ್ತು ಪರಮಾತ್ಮ ಎಂಬ ಅವಸ್ಥೆಗಳಾಗುತ್ತವೆ. ಬಹಿರಾತ್ಮತೆಯು ಹೀನಸ್ಥಿತಿ. ಅದು ಮಿಥ್ಯಾತ್ವದಿಂದ ಕೂಡಿರುತ್ತದೆ. ಆತ್ಮ ಬಾಹ್ಯದ ಆಚಾರ- ವಿಚಾರ-ನಂಬಿಕೆಗಳಿಂದ ಕೂಡಿ ತೀರ ಕೆಳ ಅಂತಸ್ತಿನಲ್ಲಿ, ಅಂಧಕಾರದಲ್ಲಿದ್ದು ದುರ್ಗತಿಗಳಲ್ಲಿ ಸುತ್ತಾಡುತ್ತಿರುತ್ತದೆ. ಇದೇ ಆತ್ಮ ಭೋಧಿಲಾಭದಿಂದ ಸಮ್ಯಕ್ತ್ವದ ಧಾರಣೆಯ ಅವಕಾಶ ದೊರೆತಾಗ ಅಂತರಾತ್ಮನೆನಿಸಿ ಮಧ್ಯಮಸ್ಥಿತಿ ಗೇರಿ ವಿಕಾಸದ ಹಾದಿಯಲ್ಲಿ ಸಾಗಿ ಸುಧಾರಿಸುತ್ತದೆ. ಇದೇ ಮುಂದುವರಿದು ಪೂರ್ಣ ವಿಕಾಸದ ಸ್ಥಿತಿಯನ್ನು ಹೊಂದಿ ಉತ್ತಮನೆನಿಸಿ ಪರಮಾತ್ಮನಾಗುತ್ತದೆ. ಇವೆಲ್ಲಾ ಗುಣಗಳ ಶ್ರೇಣಿಗೆ ಸಂಬಂಧಿಸಿದ ವಿಕಾಸದ

ಹಂತಗಳು. ಇವನ್ನು ಪೂರ್ಣರೂಪದಲ್ಲಿ ತಿಳಿಯಲು ಆಚಾರ್ಯರು ಗುಣಸ್ಥಾನಗಳನ್ನು ಹದಿನಾಲ್ಕು ವಿಧವಾಗಿ ತಿಳಿಸಿದ್ದಾರೆ. ಇವು ಆಧ್ಯಾತ್ಮಿಕ ಗುಣಗಳ ಪ್ರಗತಿಯ, ಆತ್ಮನ ಉತ್ತಮತೆಯ ವಿಕಾಸದ ನಿರ್ಣಯದ ಹಂತಗಳಾಗಿವೆ. ಅವು ಯಾವುವೆಂದರೆ 1) ಮಿಥ್ಯಾತ್ವ 2) ಸಾಸಾದನ 3) ಮಿಶ್ರ 4) ಅವಿರತ ಸಮ್ಯಗ್ದೃಷ್ಟಿ 5) ದೇಶವಿರತಿ 6) ಪ್ರಮತ್ತಾಪ್ರಮತ್ತ 7) ಅಪ್ರಮತ್ತ 8) ಅಪೂರ್ವಕರಣ 9) ಅನಿವೃತ್ತಿಕರಣ 10) ಸೂಕ್ಷ್ಮಸಂಪರಾಯ 11) ಉಪಶಾಂತಕಷಾಯ 12) ಕ್ಷೀಣಮೋಹ 13) ಸಯೋಗಕೇವಲಿ 14) ಅಯೋಗಕೇವಲಿ.

ಇವೆಲ್ಲಾ ಆತ್ಮನ ಗುಣಗಳ ಹೀನೋನ್ನತಿಯ ಮಜಲುಗಳಾಗಿವೆ.

**1) ಮಿಥ್ಯಾತ್ವಗುಣಸ್ಥಾನ :**

ಇದು ತೀರಾ ಕೆಳದರ್ಜೆಯ ಆತ್ಮನ ಸ್ಥಿತಿ. ಯಾರು ದೇವರು, ಗುರು,ಶಾಸ್ತ್ರ, ಧರ್ಮ, ಕರ್ಮ, ಪಾಪ, ಪುಣ್ಯ, ಒಳ್ಳೆಯ, ಕೆಟ್ಟ,ಹೇಯ, ಉಪಾಧೇಯಗಳೆಂಬ ಅರಿವಿಲ್ಲದೆ ಅಂಧ ಶ್ರದ್ಧೆ, ಮೂಢನಂಬಿಕೆಯಿಂದ ಕೂಡಿ, ಅತ್ಯಾಚಾರ, ಅನ್ಯಾಯ, ಹಿಂಸೆ ಅಸತ್ಯ-ವ್ಯಭಿಚಾರ, ಕಳ್ಳತನ, ಮಾಯಾಚಾರ, ಕೋಪ, ತಾಪ, ಗರ್ವ-ರಾಗ, ದ್ವೇಷಗಳಿಂದ ಕೂಡಿದ್ದು ಸದಾ ಅಜ್ಞಾನದಿಂದ, ಸಂಶಯದಿಂದ, ಹಟ, ದುರಾಗ್ರಹದಿಂದ ಅತಿವಿನಯ, ವಿಪರೀತ ವರ್ತನೆಯಿಂದ ಹೀನವಾದ ಜೀವನ ಮಾಡುತ್ತ ಏನೋ ಹುಟ್ಟಿ, ಹೇಗೋ ಬಾಳಿ ಎಲ್ಲಿಯೋ ಸಾಯುವ ಸ್ಥಿತಿಯಲ್ಲಿರುವ ಜೀವಿಗಳ ಸ್ಥಿತಿಯು ಮಿಥ್ಯಾತ್ವದಿಂದ ಕೂಡಿರುತ್ತದೆ. ಅದಕ್ಕೆ ಸತ್ಯದ ಅರಿವಿರುವುದಿಲ್ಲ. ಆತ್ಮೀಕವಾದ ತಿಳಿವಳಿಕೆ ಇರುವುದಿಲ್ಲ. ಇದು ಬಹಿರಾತ್ಮ ಸ್ಥಿತಿ ಇರುತ್ತದೆ. ಈ ಜೀವಕ್ಕೆ ಕೇವಲ ಬಾಹ್ಯದ, ಲೌಕೀಕದ ದೃಷ್ಟಿ ಇರುತ್ತದೆ. ಇದು ಸತ್ಯ ಶೋಧನೆಗೆ ಪ್ರಯತ್ನಿಸುವುದಿಲ್ಲ. ಈ ಸ್ಥಿತಿಯು ಎಲ್ಲಾ ಗತಿಯ ಜೀವಿಗಳಲ್ಲೂ ಇರುತ್ತದೆ. ಇವರಿಗೆ ವ್ರತ, ನೇಮ, ನಿಷ್ಠೆ, ಸದಾಚಾರ, ಸದ್ವಿಚಾರಗಳ ಪರಿವೆ ಇರುವುದಿಲ್ಲ. ಮೋಹದ ತೀವ್ರ ಪರಿಣಾಮವಿರುತ್ತದೆ. ಅಭವ್ಯರೂ ಅಸಂಜ್ಞೀ ಪಂಚೇಂದ್ರಿಯ ವರೆಗಿನ ಎಲ್ಲಾ ಜೀವಿಗಳೂ ಮಿಥ್ಯಾದೃಷ್ಟಿಗಳೇ ಆಗಿರುತ್ತಾರೆ.

**2) ಸಾಸಾದನಗುಣಸ್ಥಾನ :**

ಮಿಥ್ಯಾತ್ವದಲ್ಲಿರುವ ಆತ್ಮನಿಗೆ ಕೆಲವೊಮ್ಮೆ ನಿಜವಾದ ದೇವರು, ಗುರು, ಧರ್ಮ ಶಾಸ್ತ್ರಗಳನ್ನು ಅರಿವು ಮಾಡಿಕೊಂಡು ನಂಬಿ, ಆಚರಿಸುವ ಅವಕಾಶವು ದೊರೆಯುತ್ತದೆ. ಸತ್ಯದ ಶೋಧನೆಯ ಕಡೆ ಪ್ರಯತ್ನದ ಸಾಧನೆ ಮಾಡುತ್ತದೆ. ಆದರೆ



ಕೇವಲ ಪ್ರಯತ್ನಪಟ್ಟು ಮಿಥ್ಯಾತ್ವದ ಬಲವು ಹೆಚ್ಚಾಗಿರುವುದರಿಂದ ಅದರ ಪ್ರಯತ್ನ ಸಫಲವಾಗದೆ ಮತ್ತೆ ಮಿಥ್ಯಾದೃಷ್ಟಿಯೇ ಆಗಿರುತ್ತದೆ. ಇದೂ ಬಹಿರಾತ್ಮದ ಸ್ಥಿತಿಯೇ ಆಗುತ್ತದೆ. ಇದೂ ಕೆಳದರ್ಜೆಯ ಆತ್ಮವೇ ಆಗಿದ್ದು ವ್ರತ, ನೇಮ ಸದಾಚಾರಗಳನ್ನು ಮಾಡಲಾರದಾಗಿರುತ್ತದೆ.

**3) ಮಿಶ್ರಗುಣಸ್ಥಾನ :**

ಕೆಲವು ಜೀವಿಗಳು ಕೆಟ್ಟ ಆಚಾರ- ಮಿಥ್ಯಾನಂಬಿಕೆಗಳನ್ನು ಬಿಡುವುದಿಲ್ಲ. ಆದರೆ ಒಳ್ಳೆಯ ಆಚಾರ, ಧರ್ಮಗಳ ಕಡೆ ಒಲವೂ ಇರುತ್ತದೆ. ಇಂತಹವರಲ್ಲಿ ಸತ್ಯಮಿಥ್ಯಗಳ ಮಿಶ್ರಭಾವದ ಗುಣವಿರುತ್ತದೆ. ಅಲ್ಲಿದ್ದಾಗ ಆದೇ ಸರಿ, ಇಲ್ಲಿದ್ದಾಗ ಇದೇ ಸರಿ. ಯಾವುದರಲ್ಲೂ ನಿಲುಕಡೆ ಇರುವುದಿಲ್ಲ. ಇಂತಹವರಲ್ಲಿ ಸ್ಥಿರತೆ ಇರುವುದಿಲ್ಲ. ಮೊಸರಿಗೆ ಸಕ್ಕರೆ ಹಾಕಿ ಸೇವಿಸಿದಂತೆ ಹುಳಿಯು ಅಲ್ಲ, ಸಿಹಿಯು ಅಲ್ಲದ ರುಚಿಯಾದಂತೆ ಅವರ ಮನೋಭಾವ ಡೋಲಾಯಮಾನವಾಗಿರುತ್ತದೆ. ಇವರೂ ವ್ರತ, ನೇಮ ನಿಷ್ಠೆಗಳನ್ನು ಮಾಡಲಾರರು. ಸತ್ಯದ ಅರಿವು ಇವರಿಗೆ ಆಗುವುದಿಲ್ಲ. ಮಿಥ್ಯತ್ವವನ್ನು ಬಿಟ್ಟಿರುವುದಿಲ್ಲ. ಇವರಿಗೆ ಸಮ್ಯಕ್ತ್ವ ಲಭಿಸಿವುದಿಲ್ಲ ವಾದ್ದರಿಂದ ಇವರೂ ಬಹಿರಾತ್ಮರೇ ಆಗಿರುತ್ತಾರೆ. ಇವರಲ್ಲಿ ವಿವೇಕದಲ್ಲಿ ಅಸ್ಥಿರತೆ ಇರುತ್ತದೆ. ಇವರಿಗೆ ಮೋಹಿನೀಯ ಕರ್ಮದ ಉಲ್ಬಣವಿರುತ್ತದೆ. ಈ ಮೂರೂ ಹಂತಗಳು ಕನಿಷ್ಠ ದರ್ಜೆಯವು.

**4) ಅವಿರತ ಸಮ್ಯಗ್ದೃಷ್ಟಿ ಗುಣಸ್ಥಾನ :**

ಯಾವ ಜೀವಿಗಾದರೂ ಕಾಲಲಬ್ಧಿ ಒದಗಿ ಜಿನ ಭಗವಂತನ ದರ್ಶನ, ಜಿನಧರ್ಮದಲ್ಲಿ ಆಸಕ್ತಿ, ನಂಬಿಕೆ, ಜಿನಗುರುಗಳ ಉಪದೇಶ. ಜಿನವಾಣಿಯ ಸ್ವಾಧ್ಯಾಯ ಬೋಧಿಲಾಭವಾದಾಗ ನಿಜವಾದ ದೇವರ, ಗುರುಗಳ, ಶಾಸ್ತ್ರದಲ್ಲಿ ಪೂರ್ಣ ನಂಬಿಕೆಯುಂಟಾಗುತ್ತದೆ. ಆ ಜೀವಿಗೆ ಆತ್ಮ ತತ್ತ್ವದ ಅರಿವಾಗುತ್ತದೆ. ಧರ್ಮ, ಕರ್ಮ, ಪಾಪ, ಪುಣ್ಯ, ಒಳ್ಳೆಯ, ಕೆಟ್ಟ ವಿಚಾರಗಳ, ಸುಖ, ದುಃಖಗಳ ಸತ್ಯ, ಮಿಥ್ಯಗಳ ಅರಿವಾಗುತ್ತದೆ. ತತ್ತ್ವಗಳಲ್ಲಿ, ಜೀವ ಜಡಗಳಲ್ಲಿ ಪೂರ್ಣ ವಿಶ್ವಾಸ ಮೂಡಿ ತನ್ನ ಆತ್ಮನ ವಿಕಾಸದ ಮಾರ್ಗದಲ್ಲಿ ಸಾಗುವ ವಿವೇಕವು ಬರುತ್ತದೆ. ಸದಾಚಾರಸಂಪನ್ನನಾಗಿ ಧರ್ಮದಲ್ಲಿ ಪೂರ್ಣ ನಂಬಿಕೆಯುಳ್ಳವನಾಗಿ ಸರಳ ಸಜ್ಜನನಾಗಿ ಬಾಳುತ್ತಾನೆ. ಆದರೆ ಈತನಿಗೆ ವ್ರತಗಳನ್ನು ಮಾಡಲಾಗುವುದಿಲ್ಲ. ಆದರೂ ಮಧು, ಮದ್ಯ ಮಾಂಸ ತ್ಯಾಗ ಮಾಡಿರುತ್ತಾರೆ. ಪಂಚ ಔದುಂಬರ ಫಲತ್ಯಾಗ

ಮಾಡಿರುತ್ತಾನೆ. ನೀತಿ ನಿಯಮ ಪಾಲಕನಾಗಿರುತ್ತಾನೆ. ಸಭ್ಯನಾಗಿರುತ್ತಾನೆ. ಭಯ, ಅನುಮಾನಗಳಿರುವುದಿಲ್ಲ ದರ್ಶನ ಮೋಹನೀಯ ಕರ್ಮವು ಇಲ್ಲವಾಗಿರುತ್ತದೆ. ಧರ್ಮದಲ್ಲಿ ಶ್ರದ್ಧೆ ಇರುತ್ತದೆ. ಆದರೆ ಆಚಾರ ಮಾಡಲು ಅಸಮರ್ಥನಾಗಿರುತ್ತಾನೆ. ಈತನು ಆತ್ಮಗುಣಗಳ ವಿಕಾಸದ ಹಂತ ದಲ್ಲಿರುತ್ತಾನೆ. ಈತ ಅಂತರಾತ್ಮನೆನಿಸಿ ಆತ್ಮೋನ್ನತಿಯ ಕಡೆ ಸಾಗುತ್ತಿರುತ್ತಾನೆ. ಇದು ಆತ್ಮೋನ್ನತಿಯ ಪ್ರಥಮಹಂತ. ಈತನು ಒಂದನೆಯ ನೈಷ್ಠಿಕಶ್ರಾವಕ.

## 5) ದೇಶ ವಿರತಿ ಗುಣಸ್ಥಾನ :

ಸಮ್ಯಗ್ದೃಷ್ಟಿಗಳು ಮುಂದುವರಿದು ಅಲ್ಪಸ್ವಲ್ಪ ವ್ರತ ನೇಮ ನಿಷ್ಠೆಗಳನ್ನು ಮಾಡುತ್ತ ಗೃಹಸ್ಥಾನ ಧರ್ಮವನ್ನು ನಿರತಿಚಾರ ಪೂರ್ವಕವಾಗಿ ಪರಿ ಪಾಲಿಸುತ್ತಾರೆ. ಅಣುವ್ರತ, ಗುಣವ್ರತ, ಶಿಕ್ಷಾ ವ್ರತಗಳನ್ನು ಪರಿಪಾಲಿಸುತ್ತಾ ಇರುತ್ತಾರೆ. ಆದರೂ ಇವರಲ್ಲಿ ಪ್ರಮಾದಗಳು ಅಂದರೆ ದೋಷಗಳು ಆಗುತ್ತಲೇ ಇರುತ್ತದೆ. ಸಂಯಮವನ್ನು ಪಾಲಿಸಲು ಪೂರ್ಣ ರೂಪದಲ್ಲಿ ಆಗುತ್ತಿಲ್ಲ. ವ್ರತಗಳ ಒಂದಂಶ ಮಾತ್ರ ಪಾಲಿಸುವವರೇ ದೇಶವ್ರತಿಗಳು. ಇವರು ಮುಂದುವರಿದು ವ್ರತಿಕಾದಿ ಹನ್ನೊಂದು ಶ್ರಾವಕರ ನೆಲೆಗಳನ್ನು ಪಾಲಿಸಬಲ್ಲರು. ಶ್ರಾವಕರೂ, ಕ್ಷುಲ್ಲಕರೂ, ಐಲಕರೂ ದೇಶವ್ರತಿ ಗುಣಸ್ಥಾನ ವರ್ತಿಗಳೇ ಆಗಿರುತ್ತಾರೆ. ಇದು ಸಮ್ಯಗ್ದೃಷ್ಟಿ ಗಳಾದ ಮಾನವರಿಗೆ ಮಾತ್ರ ಸಾಧ್ಯ. ವ್ರತಿಕರಾದ ಶ್ರಾವಕರ ನೆಲೆಗಳ ಏರಿಕೆಗಳು ಇಲ್ಲಿಂದ ಆತ್ಮೋನ್ನತಿಯು, ಆತ್ಮ ವಿಕಾಸವೂ, ಆತ್ಮಶುದ್ಧಿಯೂ ಹೆಚ್ಚುತ್ತಾ ಹೋಗುತ್ತದೆ.

## 6) ಪ್ರಮತ್ತಾ ಪ್ರಮತ್ತ ಗುಣಸ್ಥಾನ :

ಸಮ್ಯಗ್ದೃಷ್ಟಿಗಳಾದ ವ್ರತಿಕರು ಹನ್ನೊಂದು ನೆಲೆಗಳನ್ನು ದಾಟಿ ತಾವು ಮಾಡುವ ವ್ರತಗಳನ್ನು ಮಹಾವ್ರತಾದಿ 28 ಮೂಲಗುಣಗಳನ್ನು ಪಾಲಿಸುತ್ತಿರುವ ಮಹಾ ಮುನಿಗಳ ಸ್ಥಾನವೇ ಪ್ರಮತ್ತಾ ಪ್ರಮತ್ತ ಗುಣಸ್ಥಾನ. ಇವರು ಸದಾ ದೋಷ ರಹಿತವಾದ, ನಿರತಿಚಾರವಾದ ವ್ರತ, ನಿಯಮಗಳನ್ನು ಪರಿಪಾಲಿಸುತ್ತಿದ್ದರೂ ಕೆಲವೊಮ್ಮೆ ಅತಿಚಾರಗಳಾಗುತ್ತಿರುತ್ತವೆ. ಆದರೆ ಕೂಡಲೇ ತಿದ್ದಿಕೊಂಡು ಆತ್ಮ ಸಾಧನೆಯಲ್ಲಿ ತೊಡಗುತ್ತಾರೆ. ಇವರು ಸಂಸಾರ, ಶರೀರಗಳ ಭೋಗವನ್ನು ತೊರೆದು ಮಹಾವ್ರತಿಗಳಾಗಿರುತ್ತಾರೆ. ಪಂಚಾಚಾರ, ಪಂಚಸಮಿತಿ, ಷಡಾವಶ್ಯಕ ಕ್ರಿಯೆ ಮುಂತಾದ ಮುನಿವ್ರತಗಳನ್ನು, ನಿಯಮಗಳನ್ನೂ ಪಾಲಿಸುತ್ತಾ ಇರುತ್ತಾರೆ. ಇದು



ಆತ್ಮ ವಿಕಾಸದ ಶ್ರೇಷ್ಠವಾದ ಹಂತ. ಇವರು ಉತ್ತಮ ಅಂತರಾತ್ಮ ಗುಣಸ್ಥಾನದವರಾಗಿರುತ್ತಾರೆ. ಅಪರಿಗ್ರಹಿಗಳಾದ ಜ್ಞಾನ, ಧ್ಯಾನ, ತಪೋನಿರತರಾದ ನಿರ್ಗ್ರಂಥ ಮಹಾ ಮುನಿಗಳಾಗಿರುತ್ತಾರೆ. ಧ್ಯಾನದಲ್ಲಿ ತೊಡಗಿದ್ದಾಗ ಅಪ್ರಮತ್ತರೂ, ಆಹಾರ-ವಿಹಾರ ಮುಂತಾದ ವ್ಯವಹಾರದಲ್ಲಿದ್ದಾಗ ಪ್ರಮತ್ತರೂ ಆಗಿರುತ್ತಾರೆ.

## 7. ಅಪ್ರಮತ್ತ ಗುಣಸ್ಥಾನ:–

ಸಮ್ಯಗ್ದೃಷ್ಟಿಗಳಾದ ಮಹಾಮುನಿಗಳು ಆತ್ಮಧ್ಯಾನದಲ್ಲಿ ತೊಡಗಿದ್ದಾಗ ಅವಸ್ಥೆಯೇ ಅಪ್ರಮತ್ತ ಗುಣಸ್ಥಾನ ವರ್ತಿಗಳಾಗಿರುತ್ತಾರೆ. ನಿರ್ದೋಷವಾದ ಮುನಿಧರ್ಮ ಪಾಲನೆಯ ಸ್ಥಿತಿ. ಆಗ ಯಾವ ಪ್ರಮಾದ ಅಂದರೆ ದೋಷಗಳೂ ಅವರಿಗೆ ಆಗುವುದಿಲ್ಲ, ಇಲ್ಲಿಂದ ಕರ್ಮ ನಿರ್ಜರೆಯಾಗುತ್ತಿರುತ್ತದೆ. ನಿರ್ದೋಷ ವಾದ ಆತ್ಮೋನ್ನತಿಯ ಸಾಧನೆ. ಶುದ್ಧಾತ್ಮ ತತ್ತ್ವದ ವಿಚಾರಮಗ್ನರಾಗಿ ಧ್ಯಾನದಲ್ಲಿ ತೊಡಗಿರುತ್ತಾರೆ. ಈ ಸ್ಥಿತಿ ಬಹುಕಾಲ ಇರುವುದಿಲ್ಲ. ಅವರು ಮತ್ತೆ ಆರನೇ ಗುಣಸ್ಥಾನಕ್ಕೆ ಹಿಂದಿರುಗುತ್ತಾರೆ ಅಥವಾ ಮುಂದಿನ ಗುಣಸ್ಥಾನಕ್ಕೆ ಏರುತ್ತಾರೆ.

## 8. ಅಪೂರ್ವ ಕರಣ ಗುಣಸ್ಥಾನ :–

ಧ್ಯಾನಾಸಕ್ತರಾದ ಮುನಿಗಳ ಪರಿಣಾಮವು ವಿಶುದ್ಧವಾಗುತ್ತಿರುವ ಸ್ಥಿತಿಯೇ ಅಪೂರ್ವಕರಣ. ಅಂದರೆ ತಮ್ಮ ಮನ, ವಚನ, ಕಾಯಗಳ ಒಂದು ರೀತಿಯ ಅಪೂರ್ವವಾದ, ಹಿಂದೆಂದೂ ಇಲ್ಲದ ಸ್ಥಿತಿಗೇರಿ ಆತ್ಮ ದರ್ಶನ, ಆನಂದ, ಶಕ್ತಿ, ಚೇತನಗಳನುಭವವನ್ನು ಹೊಂದುವ ಗುಣಸ್ಥಾನವಾಗಿರುತ್ತದೆ. ಈ ಹಂತದಲ್ಲಿ ಆತ್ಮ ಬೇರೆ, ಶರೀರ ಬೇರೆ ಎಂಬ ಭೇದ ವಿಜ್ಞಾನದಲ್ಲಿ ತೊಡಗಿ ಪರವನ್ನು ಮರೆತಿರುತ್ತಾರೆ. ಚಾರಿತ್ರ ಮೋಹನೀಯ ಕರ್ಮವನ್ನು ಕ್ಷಯ, ಉಪಶಮಗೊಳಿಸಿ ವಿಶಿಷ್ಟವಾದ ಆನಂದಾನುಭವವನ್ನು ಹೊಂದಿರುತ್ತಾರೆ. ಇಲ್ಲಿಯೂ ಹೆಚ್ಚು ಹೊತ್ತಿರದೆ ಕೆಳಕ್ಕೂ ಬರಬಹುದು, ಮೇಲಿನ ಹಂತಕ್ಕಾದರೂ ಸಾಗಬಹುದು,

## 9) ಅನಿವೃತ್ತಿಕರಣ ಗುಣಸ್ಥಾನ:–

ಭೇದ ವಿಜ್ಞಾನದಲ್ಲಿ ತೊಡಗಿದ ಧನಸ್ಥರಾದ ಮುನಿಗಳು ಆತ್ಮ ಸ್ಥಿತಿಯಿಂದ ನಿವೃತ್ತರಾಗಲು ಇಷ್ಟ ಪಡದೆ ಮತ್ತೆ ಮತ್ತೆ ಆತ್ಮಾನುಭವದ ಆನಂದವನ್ನು ಸವಿಯುತ್ತಿರುವಾಗ ಅವರು ಪರವನ್ನು, ಬಾಹ್ಯವನ್ನು, ಶರೀರವನ್ನು ಮರೆತು

ಪಾರಲೌಕೀಕವಾದ ಆತ್ಮಧ್ಯಾನದಲ್ಲಿ ತೊಡಗಿರುತ್ತಾರೆ. ಇದೂ ಕೇವಲ ಒಂದು ಅಂತರ್ ಮುಹೂರ್ತ ಮಾತ್ರವಿರುತ್ತದೆ. ಆತ್ಮನ ನಿರ್ಮಲತೆ, ಸಮತಾಭಾವ, ನಿಷ್ಕಾಮಕರ್ಮಯೋಗದಲ್ಲಿರುತ್ತಾರೆ.

**10) ಸೂಕ್ಷ್ಮಸಾಂಪರಾಯ:–**

ಧ್ಯಾನಸ್ಥಮುನಿಗಳು ಮೋಹ ಮತ್ತು ಕಷಾಯಗಳನ್ನು ಸೂಕ್ಷ್ಮ ಸೂಕ್ಷ್ಮವಾಗಿ ಕಳೆದುಕೊಳ್ಳುತ್ತಿರುವ ಅವಸ್ಥೆ ಇದು. ಅವರ ಆತ್ಮನಲ್ಲಿ ಕೇವಲ ಕನ್ನಡಿಯ ಮೇಲೆ ಧೂಳು ಕುಳಿತಂತೆ ಕಾಣುತ್ತದೆ. ಬೃಹತ್ ಕರ್ಮಗಳನ್ನು ಕಳೆದುಕೊಂಡಿರುತ್ತಾರೆ. ಅವರಲ್ಲಿ ಕೇವಲ ಲೋಭ ಕಷಾಯದ ಅಂಶ ಮಾತ್ರ ಉಳಿದಿರುತ್ತದೆ. ಆತ್ಮನ ಪರಿಶುದ್ಧ ಅವಸ್ಥೆಗೆ ಏರುವ ಸ್ಥಿತಿಯಾಗಿರುತ್ತದೆ. ಇಲ್ಲಿಯಥಾ ಖ್ಯಾತ ಚಾರಿತ್ರದಲ್ಲಿ ಸ್ವಲ್ಪ ನ್ಯೂನತೆ ಇರುತ್ತದೆ ಅಷ್ಟೆ.

**11) ಉಪಶಾಂತ ಕಷಾಯ ಗುಣಸ್ಥಾನ:–**

ಧ್ಯಾನಸ್ಥರಾದ ಮುನಿಗಳು ಮುಂದುವರಿದು ಲೋಭಕಷಾಯವನ್ನು ಪೂರ್ಣವಾಗಿ ಕಳೆದುಕೊಂಡು ಮುಂದಿನ ಗುಣಸ್ಥಾನಕ್ಕೇರುವ ಹಂತದಲ್ಲಿರುತ್ತಾರೆ. ಇಲ್ಲಿ ಕರ್ಮಗಳು ಪೂರ್ಣ ಶಿಥಿಲಗೊಂಡು ನಾಶವಾಗುವ ಹಂತಕ್ಕೆ ತಲುಪುತ್ತವೆ. ಈ ಗುಣಸ್ಥಾನದ ಸ್ಥಿತಿಯ ಕಾಲಬಹು ಕಡಿಮೆ. ಇದಕ್ಕೆ ಉಪಶಾಂತ ಮೋಹ ಗುಣಸ್ಥಾನವೆಂತಲೂ ಹೇಳುವರು. ಮೋಹದ ಶಕ್ತಿ ಕುಗ್ಗಿ ಹೋಗಿರುತ್ತದೆ.

**12) ಕ್ಷೀಣ ಮೋಹ ಕಷಾಯ ಗುಣಸ್ಥಾನ:–**

ಧ್ಯಾನಸ್ಥರಾದ ಮುನಿಗಳು ಮುಂದುವರಿದು ತಮ್ಮಲ್ಲಿರುವ ಮೋಹನೀಯ ಕರ್ಮವನ್ನು ಪೂರ್ಣವಾಗಿ ಕಳೆದುಕೊಳ್ಳುವ ಸ್ಥಿತಿ ಇದಾಗಿರುತ್ತದೆ. ಮುನಿಗಳ ಪರಿಣಾಮವು ಬಹಳ ವಿಶುದ್ಧವಾಗಿರುತ್ತದೆ. ಲೋಭ ಮೋಹಗಳು ಪೂರ್ಣ ನಾಶವಾಗುತ್ತವೆ. ವೀತರಾಗತೆ ಪ್ರಾಪ್ತವಾಗುತ್ತದೆ. ಪರಿಶುದ್ಧವಾದ ಆತ್ಮ ದರ್ಶನ ಜ್ಞಾನಾನಂದಗಳು ಪ್ರಕಟವಾಗುತ್ತವೆ.

**13. ಸಯೋಗ ಕೇವಲೀ ಗುಣಸ್ಥಾನ:–**

ಮಹಾಮುನಿಗಳು ಶುದ್ಧವಾದ ಭಾವದಿಂದ ಧ್ಯಾನದಲ್ಲಿ ತೊಡಗಿ ಬಿಡದೆ ಸಾಧನೆಯಲ್ಲಿ ತೊಡಗಿ ಆತ್ಮನಿಗೆ ಅನಾದಿಕಾಲದಿಂದಲೂ ಆವರಿಸಿದ್ದ ಜ್ಞಾನಾವರಣ,



ದರ್ಶನಾವರಣ, ಮೋಹನೀಯ, ಅಂತರಾಯವೆಂಬ ಆತ್ಮಘಾತಕರವಾಗಿದ್ದ ಕರ್ಮಗಳನ್ನು ಕ್ಷಯಿಸುತ್ತಾರೆ. ಆಗ ಅವರ ನೈಜ ಸ್ವಾಭಾವಿಕ ಆತ್ಮಗುಣಗಳಾದ ಅನಂತಜ್ಞಾನ, ಅನಂತದರ್ಶನ, ಅನಂತಸುಖ, ಅನಂತಬಲವೆಂಬ ಅನಂತ ಚತುಷ್ಟಯಗಳು ಪ್ರಾಪ್ತವಾಗುತ್ತವೆ. ಅವರು ಪೂರ್ಣ ರೂಪದ ವೀತರಾಗಿಗಳೂ, ನಿರ್ದೋಷರೂ, ಸರ್ವಜ್ಞರೂ ಹಿತೋಪದೇಶಿಗಳು ಎನಿಸಿ ಅರಹಂತರೂ, ಕೇವಲಿಗಳೂ ಆಗುತ್ತಾರೆ. ಅವರಿಗೆ ಮನ, ವಚನ, ಕಾಯಗಳ ಕ್ರಿಯೆಗಳು ಇದ್ದರೂ ಅದು ಶುದ್ಧಯೋಗವಾಗಿದ್ದು ಕರ್ಮ ಬಂಧಕ್ಕೆ ಕಾರಣವಾಗಿರುವುದಿಲ್ಲ. ಆದ್ದರಿಂದ ಈ ಗುಣಸ್ಥಾನಕ್ಕೆ ಸಯೋಗ ಕೇವಲಿಗುಣಸ್ಥಾನವೆನ್ನುವರು ಅವರಿಗೆ ರಾಗದ್ವೇಷಗಳಿಲ್ಲ, ಆದರೂ ಅವರಲ್ಲಿ ಅಘಾತೀಯ ಕರ್ಮಗಳಿರುತ್ತವೆ. ಅರಹಂತರು, ಕೇವಲಿಗಳು, ತಮ್ಮ ಆಯುಷ್ಯವಿರುವವರೆಗೂ ವಿಹಾರ ಮಾಡುತ್ತಾ ಧರ್ಮೋಪದೇಶ ಮಾಡುತ್ತಾರೆ.

**14) ಅಯೋಗ ಕೇವಲಿ ಗುಣಸ್ಥಾನ:–**

ಅರಹಂತರೂ, ಕೇವಲಿಗಳೂ ಆದ ಮೇಲೆ ಅವರಲ್ಲಿ ಇನ್ನೂ ಆಯುಷ್ಯ, ನಾಮ, ಗೋತ್ರ ಮತ್ತು ವೇದನೀಯವೆಂಬ ನಾಲ್ಕು ಅಘಾತೀಯ ಕರ್ಮಗಳು ಇರುತ್ತವೆ. ಅವನ್ನು ಕಳೆದುಕೊಳ್ಳಲು ಅವರು ನಿರ್ಜನ ಪ್ರದೇಶಕ್ಕೆ ಹೋಗಿ ಅಲ್ಲಿ ಶುದ್ಧವಾದ ಶುಕ್ಲಧ್ಯಾನದಲ್ಲಿ ತೊಡಗಿ ಅವನ್ನೆಲ್ಲಾ ಕಳೆದುಕೊಳ್ಳುತ್ತಾರೆ. ಆಗ ಅವರ ಪರಿಶುದ್ಧಾತ್ಮವು ಶರೀರದಿಂದ ಪೂರ್ಣ ರೂಪದಲ್ಲಿ ಬಿಡುಗಡೆ ಹೊಂದಿ ಸಿದ್ಧ ಲೋಕವನ್ನು ತಲುಪುತ್ತದೆ.

ಅಯೋಗವೆಂದರೆ ಅವರ ಮನ ವಚನ ಕಾಯಗಳ ಕ್ರಿಯೆಗಳಿರುವುದಿಲ್ಲ. ನಿಶ್ಚಲ, ನಿರ್ಮಲ ಶುದ್ಧ ಸ್ವಭಾವದಿಂದ ಕೆಲಕಾಲ ಇರುವ ಶುದ್ಧ ಅವಸ್ಥೆ ಅದಾಗಿರುತ್ತದೆ. ಆಗ ಅವರಲ್ಲಿದ್ದ ನಾಲ್ಕು ಅಘಾತೀಯ ಕರ್ಮಗಳು ನಿರ್ಜರೆಯಾಗುತ್ತವೆ.

ಇಲ್ಲಿಗೆ ಆತ್ಮನು ವಿಕಾಸದ ಕೊನೆಯ ಪೂರ್ಣ ಹಂತ ತಲುಪಿದಂತಾಗುತ್ತದೆ. ಸಿದ್ಧಾವಸ್ಥೆಯು ಯಾವ ಗುಣಸ್ಥಾನದ್ದೂ ಅಲ್ಲ. ಸಿದ್ಧಾತ್ಮನು ಕೃತಕೃತ್ಯನಾಗಿ ಮತ್ತೆ ಈ ಸಂಸಾರಕ್ಕೆ ಹಿಂದಿರುಗದೆ ಪರಮಪಾವನವಾದ ನಿತ್ಯಾನಂದ ಸುಖವನ್ನು ಅನುಭವಿಸುತ್ತಾ ಅಲ್ಲಿ ಸ್ಥಿರವಾಗಿರುತ್ತದೆ.

ಹೀಗೆ ಗುಣಸ್ಥಾನಗಳ ವಿವೇಚನೆಯಿಂದ ಸಂಸಾರದಲ್ಲಿ ಮಿಥ್ಯಾತ್ವವನ್ನು ಕಳೆದುಕೊಂಡು ಸಮ್ಯಕ್ತ್ವವನ್ನು ಹೊಂದಿ ಶ್ರದ್ಧಾ, ಜ್ಞಾನ, ಚಾರಿತ್ರಗಳಿಂದ ಆತ್ಮ

ವಿಕಾಸದ ಹಂತಗಳನ್ನು ಏರಿ ಆತ್ಮನು ಪ್ರಯತ್ನದಿಂದ ಪರಿಶುದ್ಧನಾಗಿ ಪರಮಾತ್ಮನಾಗಬಹುದು ಎಂಬ ಬೋಧೆಯಾಗುತ್ತದೆ. ಆತ್ಮನು ಸಾಂಸಾರಿಕ ಜೀವನದ ಸ್ಥಿತಿಯಿಂದ ಸಿದ್ಧಪದವಿಗೇರಲು ರತ್ನತ್ರಯದ ಸಹಾಯದಿಂದ ಹಂತಹಂತವಾಗಿ ಮೋಹ, ಕಷಾಯ, ಕರ್ಮಗಳನ್ನು ನಾಶಮಾಡುತ್ತಾ ತನ್ನ ಆತ್ಮಕಲ್ಯಾಣವನ್ನು ಮಾಡಿಕೊಳ್ಳಬಹುದು. ಈ ಕ್ರಮಾನುಸರಣೆಯಿಂದ ಆತ್ಮೋನ್ನತಿಯಾಗುವುದು. ಇದನ್ನು ಯಾರು ಬೇಕಾದರು ಮಾಡಬಹುದು. ಮೊದಲ ಮೂರು ಗುಣಸ್ಥಾನಗಳು ಹೇಯವಾದವುಗಳು, ಮುಂದಿನವುಗಳು ಉಪಾದೇಯವಾದವುಗಳು. 4-5 ಶ್ರಾವಕನ ದರ್ಜೆಯವು. ಮುಂದಿನವು ಮುನಿಗಳ ದರ್ಜೆಯವು. ಈ ಪಂಚಮ ಕಾಲದಲ್ಲಿ ಮುನಿಗಳೂ ಕೂಡ 6-7 ನೇ ಗುಣಸ್ಥಾನ ಹೆಚ್ಚೆಂದರೆ 10ನೇ ಗುಣಸ್ಥಾನದವರೆಗೆ ಮಾತ್ರ ಏರಬಲ್ಲದು. ಈಗ ಪೂರ್ಣ ಕರ್ಮಕ್ಷಯವಿಲ್ಲ.

ಆತ್ಮನು ಗುಣಸ್ಥಾನಗಳನ್ನು ಏರುತ್ತಾ ಇರುವಾಗ ಕರ್ಮಗಳ ಬಂಧ-ಉದಯ-ಸತ್ತಾ-ಫಲಗಳಲ್ಲಿ ವ್ಯತ್ಯಾಸವಾಗುತ್ತಿರುತ್ತವೆ.

ಗುಣಸ್ಥಾನಗಳ ಹೆಚ್ಚಿನ ವಿವರಗಳಿಗೆ ಗೊಮ್ಮಟ ಸಾರಾದಿ ಗ್ರಂಥಗಳ ಸ್ವಾಧ್ಯಾಯ ಮಾಡಬೇಕು.

## 84. ಶ್ರೀ ಗಣೇಶಪ್ರಸಾದ್‌ವರ್ಣೀಜೀ

ಈ ಪಂಚಮಕಾಲದ ಭೌತಿಕಯುಗದಲ್ಲೂ ಜೈನ ಜನತೆಗೆ ಆಧ್ಯಾತ್ಮಿಕ ರಸಗಂಗೆಯನ್ನು ಹರಿಸಿ ಪಾನ ಮಾಡಿಸಿ ಕೀರ್ತಿಶೇಷರಾದ ಪೂಜ್ಯ ಗಣೇಶ ಪ್ರಸಾದ್‌ಜೀ ವರ್ಣಿಯವರ ಸ್ಮರಣೆಯನ್ನು ಪ್ರತಿಯೊಬ್ಬ ಜೈನ ಬಂಧುವೂ ಅವಶ್ಯವಾಗಿ ಮಾಡಲೇಬೇಕು. ಅವರು ಆಧ್ಯಾತ್ಮಿಕ ಜಗತ್ತಿಗೆ ಸೂರ್ಯನಂತೆ ಇದ್ದರು. ಜೈನದರ್ಶನದಲ್ಲಿ ಪ್ರಕಾಂಡ ಪಂಡಿತರಾಗಿದ್ದರು. ಧರ್ಮ ಪಾರಾಯಣರೂ, ನಿಷ್ಠಾವಂತ ಸಂತರೂ, ಶಾಂತ ಸ್ವಭಾವಿಗಳೂ, ಧರ್ಮ ವಿದ್ಯಾಪ್ರಸಾರಕರೂ, ಆಗಿದ್ದರು. ಇವರ ಸಂಕ್ಷಿಪ್ತ ಜೀವನ ಪರಿಚಯ ಹೀಗಿದೆ:

ಉತ್ತರ ಭಾರತದಲ್ಲಿ ಝಾನ್ಸಿ ಜಿಲ್ಲೆಗೆ ಸೇರಿದ ಹಸೇರಾ ಎಂಬ ಗ್ರಾಮದಲ್ಲಿ



ವೈಷ್ಣವ ಸಂಪ್ರದಾಯಕ್ಕೆ ಸೇರಿದ ಒಂದು ಸಾಧಾರಣ ಕುಟುಂಬದಲ್ಲಿ ಇವರು ಜನಿಸಿದರು. ಕ್ರಿ.ಶ. 1875ರಲ್ಲಿ ಇವರ ಜನನ. ಆಗ ಅವರ ಹೆಸರು ಗಣೇಶೀಲಾಲ್ ಎಂದು. ತನ್ನ 7ನೇ ವಯಸ್ಸಿನಲ್ಲಿ ವಿದ್ಯೆಯನ್ನು ಆರಂಭಿಸಿ 8ನೇ ತರಗತಿಯವರೆಗೆ ಓದಿದರು.

ಚಿಕ್ಕಂದಿನಲ್ಲೇ ಒಳ್ಳೆಯ ಗುಣವಂತರಾಗಿದ್ದರು. ಸರಳ, ಸಭ್ಯ, ಶಾಂತ ಸ್ವಭಾವದವರಾಗಿದ್ದರು. ಒಮ್ಮೆ ಅವರ ಉಪಾಧ್ಯಾಯರೊಬ್ಬರು ಗುಡಿ ಗುಡಿ ಸೇದುತ್ತಿದ್ದರು. ಅದನ್ನು ಕಂಡ ಬಾಲಕ ಗಣೇಶೀಲಾಲನು ಅವರಿಗೆ ಗುಡಿಗುಡಿ ಸೇದುವುದರಿಂದಾಗುವ ಹಾನಿಯನ್ನು ವಿವರಿಸಿ ನೀವೇ ಹೀಗೆ ದುರಭ್ಯಾಸದಿಂದಿದ್ದರೆ ವಿದ್ಯಾರ್ಥಿಗಳನ್ನು ತಿದ್ದುವವರು ಯಾರು? ಎಂದು ಹೇಳಿ ಅವರಿಂದ ಆ ದುರಭ್ಯಾಸ ವನ್ನು ಬಿಡಿಸಿದನು.

ಇಂತಹ ಗುಣಗಳು ಅವರ ತಂದೆಯವರಿಂದ ಅವರಲ್ಲಿ ಬಂದಿದ್ದವು. ಅವರು ವೈಷ್ಣವರಾದರೂ ಅವರ ತಂದೆಯವರಿಗೆ ಜೈನ ಧರ್ಮದಲ್ಲಿ ಬಹಳ ಶ್ರದ್ಧೆ ಗೌರವವಿತ್ತು. ಕಾರಣ ಅವರ ಮನೆಯ ಮುಂದೆ ಜಿನಮಂದಿರವಿತ್ತು. ಬೀದಿಯ ತುಂಬಾ ಜೈನರೇ ಇದ್ದರು. ಇಂತಹ ಉತ್ತಮ ಪರಿಸರದಿಂದ ಅವರಿಗೆ ಜೈನಧರ್ಮದ ಬಗ್ಗೆ ವಿಶ್ವಾಸವಿತ್ತು. ಅವರು ಅಣುವ್ರತಗಳನ್ನು ಪಾಲಿಸುತ್ತಿದ್ದರು. ಇದರಿಂದಾಗಿ ಆ ಗುಣಗಳು ಗಣೇಶೀಲಾಲನಲ್ಲೂ ಸಹಜವಾಗಿಯೇ ಬೆಳೆದುಬಂದವು.

ಜಿನಮಂದಿರದಲ್ಲಿ ನಿತ್ಯವೂ ನಡೆಯುವ ಪ್ರವಚನಕ್ಕೆ ಅವನು ತನ್ನ ತಂದೆಯ ಜೊತೆಯಲ್ಲಿ ಹೋಗುತ್ತಿದ್ದನು. ಪುರಾಣ, ಪ್ರವಚನಗಳನ್ನು ಕೇಳಿ ಗಣೇಶೀಲಾಲನು ಪ್ರಭಾವಿತನಾದನು. ಆತ ಅಲ್ಲಿದ್ದ ಗುರುಗಳೊಬ್ಬರಿಂದ ರಾತ್ರಿ ಭೋಜನ ತ್ಯಾಗದ ವ್ರತ ಮತ್ತು ಅಣುವ್ರತಗಳನ್ನು ಕೈಗೊಂಡನು. ಆಗ ಅವರಿಗೆ 10ನೇ ವರ್ಷದ ವಯಸ್ಸು. ಈ ವ್ರತ ಆ ಪರಿಸರ, ನಿತ್ಯವೂ ಜಿನೇಂದ್ರ ಭಗವಂತನ ದರ್ಶನ, ಸಜ್ಜನರ ಸಹವಾಸಗಳಿಂದ ಆ ಬಾಲಕನ ಬುದ್ಧಿ ವಿಕಾಸವಾಯಿತು. ಆತ ಪ್ರತಿಭಾಶಾಲಿ ಯಾಗಿದ್ದ. 8ನೇ ತರಗತಿಯಿಂದ ಮುಂದಕ್ಕೆ ಓದಲಾಗಲಿಲ್ಲ. ಅವನ ಸೋದರರು ತೀರಿಕೊಂಡರು. ಅವನ 18ನೇ ವಯಸ್ಸಿಗೇ ಅವನ ತಂದೆ ತಾಯಿಯರು ಬಲವಂತ ಮಾಡಿ ಮದುವೆ ಮಾಡಿದರು. ಆದಾದ ನಂತರ ಕೆಲವೇ ದಿನಗಳಲ್ಲೇ ಅವರ ತಂದೆ ತೀರಿಕೊಂಡರು. ಅವರು ಸಾಯುವ ಮುನ್ನ ಗಣೇಶೀಲಾಲನನ್ನು ಕರೆದು "ಮಗೂ ನೀನು ಜೀವನದಲ್ಲಿ ಶಾಂತಿಯನ್ನು ಬಯಸುವುದಾದರೆ ಪವಿತ್ರವಾದ ಜೈನಧರ್ಮದ ವ್ರತ ನೇಮವನ್ನು ಬಿಡಬೇಡ. ಧರ್ಮವನ್ನು ನಂಬಿ, ತಿಳಿದು ಪಾಲಿಸಿ ನಿನ್ನ ಕೈಲಾದ ಸೇವೆಯನ್ನು ಮಾಡು" ಎಂದು ಕೊನೆಯುಸಿರೆಳೆದರು. ಇದರಿಂದ ಗಣೇಶೀಲಾಲನಲ್ಲಿ

ಜೈನಧರ್ಮದ ಬಗ್ಗೆ ಹೆಚ್ಚಿನ ಶ್ರದ್ಧೆ ಮೂಡಿತು. ಗೃಹಸ್ಥಜೀವನವನ್ನು ಸಾಗಿಸಲು ಆರ್ಥಿಕ ಪರಿಸ್ಥಿತಿ ಉತ್ತಮವಿರಲಿಲ್ಲ. ಅದ್ದರಿಂದ ಆತ ಆ ಊರನ್ನು ಬಿಟ್ಟು ಮದನಪುರ ಎಂಬಲ್ಲಿಗೆ ಬಂದು ಅಲ್ಲಿ ಶಾಲಾ ಅಧ್ಯಾಪಕ ವೃತ್ತಿಗೆ ಸೇರಿದರು. ಕೆಲಕಾಲಾನಂತರ ಅಧ್ಯಾಪಕ ವೃತ್ತಿಯಲ್ಲಿ ಟ್ರೈನಿಂಗ್ ಪಡೆಯಲು ಆಗ್ರಾಕ್ಕೆ ಹೋದರು. ಆದರೆ ಅಲ್ಲಿ ಬಹಳ ದಿನ ಇರಲಾಗಲಿಲ್ಲ. ವಾಪಸ್ ಮದನಪುರಕ್ಕೆ ಹಿಂದಿರುಗಿದರು.

ತನ್ನ ಮಗ ಜೈನಧರ್ಮವನ್ನು ಅನುಸರಿಸುತ್ತಿರುವುದು ಅವರ ತಾಯಿಗೆ ಇಷ್ಟವಿರಲಿಲ್ಲ. ಆಕೆ ಹಲವಾರು ಪ್ರಯತ್ನಗಳಿಂದ ಅದನ್ನು ಬಿಡುವಂತೆ ಪ್ರೇರೇಪಿಸುತ್ತಿದ್ದಳು. ಅಯ್ಯಾ "ನೀನು ಧರ್ಮಪರಿವರ್ತನೆ ಹೊಂದಿ ತಪ್ಪು ಮಾಡಿದ್ದೀಯೆ, ನೀನು ಧರ್ಮಭ್ರಷ್ಟನಾಗಿದ್ದೀಯೆ. ಅದನ್ನು ಬಿಡು ಎಂದು ಪೀಡಿಸುತ್ತಿದ್ದಳು.

ಇದರಿಂದ ಗಣೇಶೀಲಾಲರಿಗೆ ಜೈನಧರ್ಮದಲ್ಲಿ ಆಸಕ್ತಿ ಕಡಿಮೆ ಆಗುವುದರ ಬದಲು ಇನ್ನೂ ಹೆಚ್ಚಾಯಿತು. ಅವರಿಗೆ ಸಂಸಾರ-ಶರೀರ-ಭೋಗಗಳಲ್ಲಿ ಉದಾಸೀನ ಹೆಚ್ಚಾಯಿತು. ಜೈನಧರ್ಮದ ಬಗ್ಗೆ ವಿಶೇಷವಾದ ಅಧ್ಯಯನ ಮಾಡಬೇಕೆಂದು ಅವರ ಮನಸ್ಸು ಕಾತುರವಾಗಿತ್ತು. ಅವರ ತಂದೆಯ ಪ್ರೇರಣೆಯು ಅವರನ್ನು ಸದಾ ಎಚ್ಚರಿಸುತ್ತಿತ್ತು. ಅವರು ತಮ್ಮ ತಾಯಿಗೂ, ಪತ್ನಿಗೂ ಬುದ್ಧಿವಾದ ಹೇಳುತ್ತಾ, ಜೈನಧರ್ಮದ ವಿಶೇಷತೆಯನ್ನು, ಪಾವಿತ್ರತೆ ಯನ್ನೂ ಹಿರಿಮೆಯನ್ನು ಹೇಳುತ್ತಾ ಇದ್ದರೂ, ಪ್ರಯೋಜನವಾಗಲಿಲ್ಲ.

ಗಣೇಶೀಲಾಲರ ಜೀವನದಲ್ಲಿ ಹಲವಾರು ಘಟನೆಗಳು ನಡೆದು ಹೋದವು. ಒಮ್ಮೆ ಅವರ ಸೋದರಸಂಬಂಧಿಯೋರ್ವನ ಮದುವೆಯಾಯಿತು. ಆಗ ಪಂಕ್ತಿಯಲ್ಲಿ ಕುಳಿತು ಊಟ ಮಾಡಲು ಲಾಲರು ಒಪ್ಪಲಿಲ್ಲ. ಕಾರಣ ನೀರನ್ನು ಸೋಸಿ ಅಡಿಗೆ ಮಾಡಿರಲಿಲ್ಲ. ಇದನ್ನು ಕಂಡ ಅವನ ಸಂಬಂಧಿಕರು ಕುಪಿತರಾದರು.

ಅವರೆಲ್ಲಾ ಲಾಲರಿಗೆ ಜಾತಿಯಿಂದ ಬಹಿಷ್ಕಾರ ಹಾಕಿದರು. ಲಾಲರು ಒಳ್ಳೆಯದೇ ಆಯಿತೆಂದು ಆ ಊರನ್ನೇ ಬಿಟ್ಟು ಟೀಕಮ್‌ಗಡಕ್ಕೆ ಹೋದರು. ಅಲ್ಲಿ ಒಂದು ಶಾಲೆಯಲ್ಲಿ ಅಧ್ಯಾಪಕರಾದರು. ಅಲ್ಲಿನ ಜೈನ ಮುಖಂಡರ ಪರಿಚಯ ಮಾಡಿಕೊಂಡು ಜಿನಮಂದಿರದಲ್ಲಿ ಪದ್ಮಪುರಾಣವನ್ನು ಪ್ರವಚನ ಮಾಡಿದರು. ಇದರಿಂದ ಆ ಊರಿನ ಪ್ರಸಿದ್ಧ ಜೈನ ವಿದುಷಿಯಾಗಿದ್ದ ಚಿರೋಂಜೀಬಾಯಿ ಎಂಬುವರ ಪರಿಚಯವಾಯಿತು. ಅವರು ಗಣೇಶೀಲಾಲನನ್ನು ಬಹು ಅಕ್ಕರೆ, ಗೌರವದಿಂದ ಪುತ್ರವಾತ್ಸಲ್ಯವನ್ನು ತೋರಿಸಿ ಪ್ರೋತ್ಸಾಹ ನೀಡಿದರು. ಯಾವುದೋ



ಜನ್ಮದ ಮಾತೃಪ್ರೇಮ ಅವರಲ್ಲಿ ಜಾಗೃತವಾಗಿ ಅವರಿಗೆ ಎಲ್ಲಾ ರೀತಿಯ ಜೀವದ ವ್ಯವಸ್ಥೆಮಾಡಿದರು. ಆಕೆಯ ಆಶ್ರಯದಿಂದ ಲಾಲರಿಗೆ ಒಂದು ಚಿಂತಾಮಣಿರತ್ನ ದೊರೆತಂತೆ ಸಂತೋಷವಾಯಿತು. ಆದರೆ ಪತ್ನಿಯು ಬರುಬರುತ್ತಾ ಜೈನಧರ್ಮವನ್ನು ತಿರಸ್ಕರಿಸುತ್ತಾ ಪತಿಯನ್ನು ನಿಂದಿಸುತ್ತಿದ್ದಳು. ಕೊನೆಗೆ ಲಾಲರನ್ನು ಬಿಟ್ಟು ಹೋದಳು. ಅವರ ತಾಯಿಯೂ ತನ್ನ ಪತ್ನಿಯ ಹಾದಿಯನ್ನೇ ಹಿಡಿದಳು. ಬಹಳ ಬುದ್ಧಿ ಹೇಳಾಯಿತು. ಪ್ರಯೋಜನವಾಗಲಿಲ್ಲ. ಆದ್ದರಿಂದ ಪತ್ನಿ ಮತ್ತು ತಾಯಿಯ ವ್ಯಾಮೋಹವನ್ನು ತೊರೆದು ಧರ್ಮ ಪಾರಾಯಣರಾಗಿದ್ದರು. ತಾನು ಧರ್ಮದ ಬಗ್ಗೆ ಹೆಚ್ಚಿನ ವ್ಯಾಸಂಗ ಮಾಡಬೇಕೆಂದು ತಾಯಿ ಸಮಾನಳಾದ ಚಿರೋಂಜಿಬಾಯಿಯವರಲ್ಲಿ ಅದನ್ನು ತಿಳಿಸಿದಾಗ ಅವರು ಒಪ್ಪಿ ಲಾಲರನ್ನು ಜಯಪುರಕ್ಕೆ ಕಳುಹಿಸಿದರು. ಅಲ್ಲಿ ಅವರು ಒಂದು ಧರ್ಮಶಾಲೆಯಲ್ಲಿ ಉಳಿದುಕೊಂಡರು. ಅಲ್ಲಿ ಅವರ ಎಲ್ಲಾ ಪದಾರ್ಥಗಳೂ ಕಳುವಾದವು. ಮತ್ತೆ ಚಿರೋಂಜಿಬಾಯಿಯವರ ಸಹಾಯ ಕೇಳಲು ಮನಸ್ಸಾಗದೆ ಲಾಲನು ನಿರ್ವಾಹವಿಲ್ಲದೆ ಪಾದಯಾತ್ರೆ ಹೊರಟು ಸುತ್ತಾಡಿದರು. ಊಟಕ್ಕಿಲ್ಲದೆ ಬಳಲಿದರು. ಉದರಪೂರ್ತಿಗಾಗಿ ಒಂದು ಊರಲ್ಲಿ ತನ್ನಲ್ಲಿದ್ದ ಛತ್ರಿಯನ್ನು ಮಾರಲು ಒಂದು ಅಂಗಡಿಗೆ ಹೋದಾಗ ಅಂಗಡಿಯವನು ಈ ಛತ್ರಿಯನ್ನು ಎಲ್ಲಿ ಕಳವು ಮಾಡಿದೆ ಎಂದು ಗದರಿಸಿ ಓಡಿಸಿದನು. ಇದರಿಂದ ಲಾಲರಿಗೆ ಬಹಳ ಆಘಾತವಾಯಿತು. ಹೇಗೋ ಖುರಾಇ ಎಂಬಲ್ಲಿಗೆ ಬಂದರು. ಅಲ್ಲಿ ಪ್ರಸಿದ್ಧ ಪಂಡಿತರಾಗಿದ್ದ ಪನ್ನಾಲಾಲಜೀ ನ್ಯಾಯದಿವಾಕರರನ್ನು ಕಂಡು ತನ್ನ ಧರ್ಮವಿದ್ಯಾರ್ಜನೆಯ ಆಸಕ್ತಿಯನ್ನು ವ್ಯಕ್ತಪಡಿಸಿದರು. ಆದರೆ ಆ ಪಂಡಿತರು ಲಾಲರನ್ನು ಹೀಯಾಳಿಸಿ 'ಹೊಟ್ಟೆಯ ಪಾಡಿಗೆ ಧರ್ಮ ಹೇಳಿಕೊಂಡು ಬಂದಿದ್ದೀಯೇ' ಎಂದು ಗದರಿಸಿ ಕಳುಹಿಸಿದರು. ಇದರಿಂದ ಮನನೊಂದ ಗಣೇಶೀಲಾಲರು ಏನಾದರೂ ತನ್ನ ನಿಷ್ಠೆಯನ್ನು ಬಿಡೆನೆಂದು ಜೈನಧರ್ಮದ ಬಗ್ಗೆ ಹೆಚ್ಚು ತಿಳಿಯಲೇಬೇಕೆಂದು ದೃಢ ಸಂಕಲ್ಪ ಮಾಡಿ ಮತ್ತೆ ತನ್ನ ತಾಯಿ ಇದ್ದ ಊರಿಗೆ ಹೋದರು. ಇದನ್ನು ಕಂಡ ತಾಯಿ 'ಕೆಟ್ಟು ಬಂದೆಯಾ ನೋಡು ನೀನು ಜೈನಧರ್ಮವನ್ನು ಬಿಟ್ಟರೆ ಮಾತ್ರ ನನ್ನ ಮನೆಗೆ ಸೇರಿಸುತ್ತೇನೆ' ಎಂದು ಗದರಿಸಿದಳು. ಅವರ ಸೋದರರೂ ಹೀಯಾಳಿಸಿದರು. ಹೆಂಡತಿಯೂ ಮಾತಾಡಿಸಲಿಲ್ಲ. ಲಾಲರು ಇದರಿಂದ ಬೇಸರ ವಾಗಿ ಏನಾದರೂ ನನ್ನ ನಿಷ್ಠೆಯನ್ನು ಬಿಡುವುದಿಲ್ಲವೆಂದು ಅಲ್ಲಿಂದ ಹೊರಟು ಕುಂಡಲಪುರ, ರಾಮಟೇಂಕ, ಗಜಪಂಥ, ಮುಂತಾದ ಸ್ಥಳಗಳ ಯಾತ್ರೆ ಮಾಡಿದರು. ಗಜಪಂಥಕ್ಕೆ ಹೋಗುವಾಗ ತನ್ನಲ್ಲಿ ಏನೂ ಹಣವಿರಲಿಲ್ಲ. ಅದಕ್ಕಾಗಿ ಅಲ್ಲಿ ನಡೆಯುತ್ತಿದ್ದ ಒಂದು ಕಾಮಗಾರಿಯಲ್ಲಿ ಕೆಲವು ದಿನ ಮಣ್ಣು ಹೊತ್ತು ಸ್ವಲ್ಪ

ಹಣ ಸಂಪಾದಿಸಿ ಹೊರಟರು. ದಿನಕ್ಕೆ 20 ಮೈಲಿಯಂತೆ ನಡೆದು ಗಜಪಂಥ ತಲುಪಿದರು. ಅಲ್ಲಿ ಇಲ್ಲಿ ಸುತ್ತಾಡಿ ಜೈನ ಪಂಡಿತರಿದ್ದ ಜಯಪುರಕ್ಕೇ ಮತ್ತೆ ಬಂದರು. ಅಲ್ಲಿ ದೈವವಶಾತ್ ವಿಶ್ವೇಶ್ವರ ಶಾಸ್ತ್ರೀ ಎಂಬುವರ ಆಶ್ರಯ ದೊರೆಯಿತು. ಅವರ ಸೇವೆ ಮಾಡುತ್ತಾ ಅವರಿಗೆ ವಿಧೇಯರಾಗಿದ್ದು, ಅಲ್ಲಿ ಮಕ್ಕಳಿಗೆ ಪಾಠ ಹೇಳಿಕೊಂಡು ಅವರಿಂದ ವ್ಯಾಕರಣ, ಸಂಸ್ಕೃತ, ಪ್ರಾಕೃತ, ತತ್ತ್ವಾರ್ಥಸೂತ್ರ, ಸರ್ವಾರ್ಥ ಸಿದ್ಧಿ ಮುಂತಾದವುಗಳ ಅಭ್ಯಾಸ ಮಾಡಿದರು. ಆನಂತರ ಬನಾರಸ್ಸಿಗೆ ಹೋಗಿ ಅಲ್ಲಿ ಬಹು ಶ್ರಮೆ ಪಟ್ಟು ನ್ಯಾಯಾಚಾರ್ಯ ಪರೀಕ್ಷೆಯಲ್ಲಿ ಉತ್ತಮ ಶ್ರೇಣಿಯಲ್ಲಿ ತೇರ್ಗಡೆಯಾದರು. ಆನಂತರ ವಿದ್ವಾಂಸರೆನಿಸಿ ಸುಮಾರು 32 ವರ್ಷಗಳ ಕಾಲ ಬೊಂಬಾಯಿ, ಜಯಪುರ, ಮಥುರಾ, ಬನಾರಸ್, ಕಲ್ಕತ್ತ ಮುಂತಾದವುಗಳಲ್ಲಿ ಪಂಡಿತರು ವಿದ್ವಾಂಸರುಗಳನ್ನು ಆಶ್ರಯಿಸಿ ನ್ಯಾಯತೀರ್ಥ, ವಿದ್ವತ್ ಶಿರೋಮಣಿ ಮುಂತಾದ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿ ಜೈನಧರ್ಮದ ಆಳವಾದ ಅಧ್ಯಯನ ಮಾಡಿ ಪಂಡಿತೋತ್ತಮರಾದರು. ಗಿರಿನಾರ್, ಶಿಖರ್‌ಜೀ ಯಾತ್ರೆಯನ್ನೂ ಮಾಡಿ ಪರಿಣಾಮ ಶುದ್ಧರಾದರು. ಕ್ರಮವಾಗಿ ಅವರಲ್ಲಿ ವೈರಾಗ್ಯ ಭಾವನೆ ಬೇರೂರಿತು. ತತ್ತ್ವಚಿಂತನೆ, ಧ್ಯಾನ, ಜಪಗಳಲ್ಲಿ ಬಹುಕಾಲ ಕಳೆದರು. 1923ರಲ್ಲಿ ಬ್ರಹ್ಮಚರ್ಯ ಪ್ರತಿಮಾಧಾರಿಗಳಾಗಿ ಗಣೇಶಪ್ರಸಾದ್ ವರ್ಣೀಜೀ ಎಂದು ಪ್ರಸಿದ್ಧರಾದರು. 1957ರಲ್ಲಿ ಕ್ಷುಲ್ಲಕ ದೀಕ್ಷಾಧಾರಿಗಳಾಗಿ ವಿಖ್ಯಾತರಾದರು. ಮೊದಲೇ ವಾಹನ ತ್ಯಾಗ ಮಾಡಿದ್ದರು. ಪಾದಯಾತ್ರೆಯಲ್ಲೇ ಇಡೀ ದೇಶವನ್ನು ಸಂಚರಿಸಿದರು. ಅವರು ಹೋದಕಡೆ ಜೈನ ಜನಾಂಗವನ್ನು ಸೇರಿಸಿ ಪ್ರವಚನ ಮಾಡುತ್ತಿದ್ದರು. ಸಮಯಸಾರ ಅವರಿಗೆ ಕಂಠಪಾಠವಾಗಿತ್ತು. ತಾವೇ ಸ್ವತಃ ಆ ಗ್ರಂಥಕ್ಕೆ ವಿಸ್ತೃತ ವ್ಯಾಖ್ಯಾನ ಬರೆದರು.

ಒಮ್ಮೆ ಒಂದು ರೂಪಾಯಿಯನ್ನು ನ್ಯಾಯದಿಂದ ಸಂಪಾದಿಸಿ ಅದರಿಂದ 3 ಕಾಸಿಗೆ ಒಂದರಂತೆ 64 ಪೋಸ್ಟ್‌ಕಾರ್ಡ್‌ಗಳನ್ನು ತೆಗೆದುಕೊಂಡು ಆ ಕಾಲದಲ್ಲಿದ್ದ ಜೈನ ಪಂಡಿತರು, ಶ್ರೀಮಂತರು, ಗಣ್ಯವ್ಯಕ್ತಿಗಳಿಗೆ ಪತ್ರ ಬರೆದರು. "ಈಗ ಜೈನರು ಮತ್ತು ಸಮಾಜವು ಎಚ್ಚೆತ್ತು ಧರ್ಮೋದ್ಧಾರಕ್ಕೆ, ಧರ್ಮದ ಅಭ್ಯಾಸಕ್ಕೆ, ಗುರುಕುಲಗಳನ್ನು ಶಾಲೆಗಳನ್ನು ತೆರೆಯದಿದ್ದರೆ ಧರ್ಮ ಖಿಲವಾಗಿ ಹೋಗಬಹುದು ಅದಕ್ಕೆ ನಿಮ್ಮ ಕೈಲಾದಷ್ಟು ಧನ ಸಹಾಯ, ಸಲಹೆ, ಸಹಕಾರವನ್ನು ನೀಡತಕ್ಕದ್ದು' ಎಂದು ಎಚ್ಚರಿಕೆಯ ಮಾತನ್ನು ತಿಳಿಸಿ ಬರೆದರು. ಅದನ್ನು ಪಡೆದ ಆಗಿನ ಗಣ್ಯವ್ಯಕ್ತಿಗಳು ಜಾಗೃತರಾಗಿ ಆವರ್ಣೀಜಿಯವರಿಗೆ ಎಲ್ಲಾ ರೀತಿಯ ಧನಸಹಾಯ ಪ್ರೋತ್ಸಾಹ ನೀಡಿಲು ಮುಂದೆ ಬಂದರು. ಅದರ ಫಲವಾಗಿ ಬನಾರಸ್, ಸಾಗರ,



ದ್ರೋಣಾಗಿರಿ, ಲಲಿತಪುರ, ಆಹಾರಕ್ಷೇತ್ರ, ಟೀಕಮ್‌ಗಡ, ಶಾಹಪುರ, ಜಬ್ಬಲ್‌ಪುರ, ಪಟನಾಗಂಜ್, ಈಸರೀ ಮುಂತಾದಕಡೆ ಜೈನವಿದ್ಯಾಲಯ, ಸ್ವಾದ್ವಾದ ಮಹಾವಿದ್ಯಾಲಯ, ಕಾಲೇಜ್, ಗುರುಕುಲ, ಉದಾಸೀನಾಶ್ರಮ, ಶ್ರಾವಕಾಶ್ರಮ, ಮಹಿಳಾಶ್ರಮ ಮುಂತಾದ ಹಲವಾರು ಸಂಸ್ಥೆಗಳು ಸ್ಥಾಪನೆಯಾದವು. ಆಗ ಜೈನ ಜನಾಂಗದಲ್ಲಿ ಧರ್ಮ ಜಾಗೃತಿ ಯಾಯಿತು. ಇವರ ಪ್ರಯತ್ನದ ಫಲವಾಗಿ ಜೈನರು ಲೌಕೀಕ ಮತ್ತು ಧಾರ್ಮಿಕ ವಿದ್ಯಾಭ್ಯಾಸದಲ್ಲಿ ನಿಪುಣರಾಗುವಂತಾಯಿತು. ವರ್ಣೀಜೀಯವರಿಗೆ ತುಂಬಾ ಆನಂದವಾಯಿತು. ತಮ್ಮ ಶ್ರಮ ಸಾರ್ಥಕವಾಯಿತು ಎಂದು ತ್ಯಾಗ ಜೀವನವನ್ನು ಸಾಗಿಸುತ್ತಿದ್ದರು. ಹಲವಾರು ಗ್ರಂಥಗಳನ್ನು ಬರೆದು ಪ್ರಕಟಿಸಿದರು. ವರ್ಣೀವಾಣಿ, ಆತ್ಮಕಥೆ, ಪತ್ರಗಳು, ಸಮಯಸಾರ ಮುಂತಾದ ಗ್ರಂಥಗಳು ಪ್ರಸಿದ್ಧವಾಗಿವೆ. ಇವರ ಶಿಷ್ಯರಲ್ಲಿ ಅಗ್ರಗಣ್ಯರಾದ ಸಹಜಾನಂದಜೀವರ್ಣೀ ಯವರು ಪ್ರಸಿದ್ಧರಾಗಿದ್ದರು. ಈಗ ಅವರೂ ಇಲ್ಲ.

ಕೊನೆಗೆ ವರ್ಣೀಜೀಯವರು ಶಿಖರ್‌ಜೀ ಹತ್ತಿರವಿರುವ ಈಸರೀ ಆಶ್ರಮದಲ್ಲಿದ್ದು ಅಂತಿಮ ಸಮಯದಲ್ಲಿ ದಿಗಂಬರ ದೀಕ್ಷಾಧಾರಿಗಳಾಗಿ ಗಣೇಶಕೀರ್ತಿ ಎಂಬ ಹೆಸರಿನಿಂದ ಸಮಾಧಿಮರಣ ಹೊಂದಿ ಸ್ವರ್ಗ ಸೇರಿದರು.

ಇವರದೇ ಆದ ವರ್ಣೀ ಗ್ರಂಥಮಾಲೆಯಲ್ಲಿ ಇವರ ಎಲ್ಲಾ ಗ್ರಂಥಗಳೂ ಪ್ರಕಟವಾಗಿವೆ. ಹೀಗೆ ಇವರ ಜೀವನಯಾತ್ರೆಯು ಒಂದು ಆದರ್ಶವಾದುದೂ, ಧರ್ಮಾತ್ಮರಿಗೆ ಪ್ರೇರಣಾದಾಯಕವೂ ಆಗಿದೆ. ಅವರು ಜೀವನದ ಪ್ರತಿಕ್ಷಣವೂ ಧರ್ಮದ ಏಳಿಗೆಗೆ ಧರ್ಮ ಪ್ರಭಾವನೆಯಲ್ಲಿ ಮತ್ತು ಮೋಕ್ಷ ಸಾಧನೆಯಲ್ಲಿ ಕಳೆದಿದೆ.

## 85. ತೀರ್ಥಯಾತ್ರೆ

**ತೀರ್ಥಕ್ಷೇತ್ರ :**

ಜೈನಧರ್ಮವು ವಿಶ್ವದಲ್ಲಿಯೇ ವಿಖ್ಯಾತವಾಗಿದೆ. ಏಕೆಂದರೆ ಈ ಧರ್ಮದ ಉದಾರ ನೀತಿ, ಪಾವಿತ್ರ್ಯತೆ, ಶ್ರೇಷ್ಠತೆ, ಆದರ್ಶತತ್ತ್ವ ಸಿದ್ಧಾಂತಗಳು, ಸಾಹಿತ್ಯ, ಕಲೆಗಳು ಲೋಕೋತ್ತರವಾಗಿವೆ. ಈ ಧರ್ಮದ ಪರಂಪರೆ, ಸಂಸ್ಕೃತಿ, ಸಭ್ಯತೆಗಳನ್ನು

ಸಾರುತ್ತಾ ಜೀವಂತಸಾಕ್ಷಿಗಳಾಗಿ ಕಂಗೊಳಿಸುತ್ತಿರುವ ಪವಿತ್ರ ಕ್ಷೇತ್ರಗಳು, ಇವು ಐತಿಹಾಸಿಕ-ಪೌರಾಣಿಕ, ಕಲಾತ್ಮಕ, ಮಹಿಮಾನ್ವಿತ, ರಮಣೀಯವಾದ ಸ್ಥಳಗಳಾಗಿ ವಿಶ್ವಪ್ರಸಿದ್ಧವಾಗಿವೆ.

ಈ ಕ್ಷೇತ್ರಗಳು ಧಾರ್ಮಿಕ ಪರಂಪರೆಯ, ಗತವೈಭವದ ಕುರುಹಾಗಿವೆ. ಪುಣ್ಯಾರ್ಜನೆಯ ಸಂಕೇತಗಳಾಗಿವೆ. ಮನಃಶಾಂತಿಯ ತಾಣಗಳಾಗಿವೆ. ಅಹಿಂಸಾ ಧರ್ಮದ, ತ್ಯಾಗ ಧರ್ಮದ ಸಾಂಸ್ಕೃತಿಕ ಕೇಂದ್ರಗಳಾಗಿವೆ. ಕಲೆಯ ಬೀಡಾಗಿವೆ. ಇದರಿಂದಾಗಿ ಜಗತ್ತಿನ ಎಲ್ಲಾ ಜನಾಂಗದ, ಪ್ರವಾಸಿಗರನ್ನು ತನ್ನತ್ತ ಆಕರ್ಷಿಸುತ್ತಾ ಈ ಕ್ಷೇತ್ರಗಳು ರಾರಾಜಿಸುತ್ತಿವೆ.

ತೀರ್ಥ ಎಂದರೆ ಪವಿತ್ರವಾದುದೆಂದೂ, ದರ್ಶಕರನ್ನು ಪವಿತ್ರರನ್ನಾಗಿ ಮಾಡುವಂತಹುದೆಂದೂ ಅರ್ಥ. ಕ್ಷೇತ್ರ ಎಂದರೆ ಇಂತಹ ಉತ್ತಮವಾದ. ಪವಿತ್ರವೂ ಆದ ಚಿಹ್ನೆಗಳಿರುವ ಸ್ಥಳ ಎಂದರ್ಥ. ಹೀಗಾಗಿ ಪವಿತ್ರವೂ, ಪಾವನವೂ ಆದ ಸ್ಥಳಗಳೇ ತೀರ್ಥಕ್ಷೇತ್ರಗಳು. ಇವು ನಮ್ಮ ಮೂಲಪುರಷರಾದ, ಧರ್ಮಪ್ರವರ್ತಕ ರಾದ ತೀರ್ಥಾಧೀಶರು ಜನ್ಮತಾಳಿದ, ತಪಸ್ಸುಗೈದ, ಕೇವಲ ಜ್ಞಾನ ಹೊಂದಿದ, ವಿಹಾರ ಮಾಡಿ ಧರ್ಮೋಪದೇಶ ನೀಡಿದ ಮತ್ತು ಮುಕ್ತಿ ಹೊಂದಿದ ಮಹೋನ್ನತ ಪೂಜ್ಯ ಸ್ಥಾನಗಳಾಗಿ, ಮತ್ತು ಕೆಲವು ಅತಿಶಯವಾದ ಮಹಿಮೆಯನ್ನು ಸಾರುವ, ಧರ್ಮಪ್ರಭಾವನೆಯ, ಮಹಾತ್ಮರಾದ ಪೂಜ್ಯ ಜಿನಮುನಿಗಳು ನೆಲೆಸಿದ್ದ ಪವಿತ್ರ ಸ್ಥಳ ಮತ್ತು ಕಲೆ, ಸಂಸ್ಕೃತಿ, ವಿದ್ಯಾಕೇಂದ್ರ ವಾಗಿರುವ ಭೂಮಿಯೇ ತೀರ್ಥಕ್ಷೇತ್ರ ಗಳಾಗಿವೆ.

ಇಂತಹ ತೀರ್ಥಕ್ಷೇತ್ರಗಳಿಗೆ ಹೋಗಿ ಬರುವುದೇ ತೀರ್ಥಯಾತ್ರೆಯಾಗಿದೆ. ಪವಿತ್ರಕ್ಷೇತ್ರಗಳ ಸಂದರ್ಶನದಿಂದ ಜೀವನವು ಸಾರ್ಥಕವಾಗುವುದು. ಈ ಕ್ಷೇತ್ರಗಳನ್ನು ಕಂಡೊಡನೆ ಯಾತ್ರಿಕರ ಕೈಗಳು ತಾವಾಗಿಯೇ ಜೋಡಿಸಿ ಮುಗಿಯುವಂತಾಗುತ್ತದೆ. ಶಿರವು ತಾನಾಗಿಯೇ ಬಾಗುತ್ತದೆ. ಭಕ್ತಿ ಉಕ್ಕೇರುತ್ತದೆ. ಇದರಿಂದ ಮನಸ್ಸಿಗೆ ಉಲ್ಲಾಸ ವಾಗುತ್ತದೆ. ಆತ್ಮ ವಿಕಾಸವಾಗುತ್ತದೆ. ಹೀಗಾಗಲು ಕಾರಣವೇನೆಂದರೆ ಅಲ್ಲಿದ್ದ ಮಹಾತ್ಮರ ಪಾದ ಧೂಳಿಯಿಂದ, ತಪೋ ಮಹಿಮೆಯಿಂದ ಆ ಕ್ಷೇತ್ರಗಳು ಪೂಜ್ಯವಾಗಿವೆ, ಪವಿತ್ರವಾಗಿವೆ. ನಮ್ಮ ಸಾಂಸಾರಿಕ, ಲೌಕಿಕ ಜಂಜಾಟಗಳಿಂದ ಸ್ವಲ್ಪ ದೂರವಾಗಿ ಅಂತಹ ತೀರ್ಥಕ್ಷೇತ್ರಗಳಿಗೆ ಯಾತ್ರೆ ಹೊರಟಾಗ ಒಂದು ರೀತಿಯ ಅಲೌಕೀಕವಾದ ಮನಃಶಾಂತಿ, ಸಂತಸ, ಸಡಗರ, ಭಕ್ತಿಭಾವನೆ ಉಂಟಾಗುತ್ತದೆ. ಅಲ್ಲಿನ ಪರಿಸರ, ಪ್ರಶಾಂತತೆ, ಪಾವಿತ್ರ್ಯತೆ, ಮಹಿಮೆ ಅತಿಶಯಗಳು ನಮ್ಮನ್ನು ಈ ರೀತಿ ಮುಗ್ಧಗೊಳಿಸಿ ಉತ್ತೇಜಿಸುತ್ತವೆ. ಧಾರ್ಮಿಕ, ನೈತಿಕ ಪ್ರಜ್ಞೆಯನ್ನು



ಮಾಡಿಸುತ್ತವೆ. ಎಂತಹ ನಾಸ್ತಿಕನೂ ಆಸ್ತಿಕನಾಗುವಂತೆ ಧರ್ಮಪ್ರಜ್ಞೆಯ ಪ್ರೇರಣೆಯಾಗುತ್ತದೆ.

**ತೀರ್ಥಯಾತ್ರೆಯ ಉದ್ದೇಶ:–**

ಯಾತ್ರಿಕರಾಗಿ ಅಲ್ಲಿಗೆ ಭೇಟಿ ನೀಡುವುದರಿಂದ ಪಾರಲೌಕೀಕದಕಡೆಗೆ ನಮ್ಮ ಮೈ, ಮನ, ಮಾತುಗಳು ಉಪಯೋಗವಾಗಿ ಶುಭಯೋಗವಾಗುವುದರಿಂದ ಪುಣ್ಯಬಂಧವಾಗುತ್ತದೆ. ಬಾಳು ಹಸನಾಗುತ್ತದೆ. ಕೆಲಸಮಯದವರೆಗಾದರೂ ಸಂಸಾರ, ಶಾರೀರಗಳ ಬಗ್ಗೆ ಮರವೆಯುಂಟಾಗಿ ವೈರಾಗ್ಯ ಮಾಡುತ್ತದೆ.

ಹಲವು ತೀರ್ಥಕ್ಷೇತ್ರಗಳ ಜನನಿಬಿಡವಾದ ಸ್ಥಳಗಳಿಂದ ದೂರವಿದ್ದು ಏಕಾಂತ ಸ್ಥಳಗಳಾಗಿವೆ. ಕೆಲವು ಎತ್ತರವಾದ ಗಿರಿಶಿಖರಗಳನ್ನು ಹೊಂದಿವೆ. ಕೆಲವು ರಮಣೀಯವಾದ ವನಗಳ ಮಧ್ಯೆ ಇವೆ. ಕೆಲವು ಗವಿ, ಗುಹೆಗಳಾಗಿವೆ. ಮತ್ತೆ ಕೆಲವು ನಗರ, ಗ್ರಾಮಗಳಲ್ಲಿದ್ದರೂ ಅತಿಶಯವಾಗಿ ಕಂಗೊಳಿಸುತ್ತವೆ.

• ಗಿರಿಶಿಖರ ಪರ್ವತಗಳ ಎತ್ತರ ಸ್ಥಳಗಳು ತೀರ್ಥಕ್ಷೇತ್ರವಾಗಿದ್ದು ಅಲ್ಲಿಗೆ ಯಾತ್ರಿಕರು ಶ್ರಮಪಟ್ಟು ಮೇಲೇರಿ ಅಲ್ಲಿರುವ ಮಂದಿರ, ಪಾದುಕೆ, ಕೂಟಗಳಿಗೆ ವಂದನೆಯನ್ನು ಉತ್ಸಾಹ ಭಕ್ತಿಯಿಂದ ಮಾಡಿ ಪೂಜಿಸಿ ನಲಿಯುತ್ತಾರೆ. ಅಲ್ಲಿ ಅಷ್ಟು ಎತ್ತರದಲ್ಲಿ ಈ ಕ್ಷೇತ್ರದ ಪೂಜಾ, ದರ್ಶನ ತಾಣಗಳು ಇರಲು ಕಾರಣವೇನೆಂದರೆ ಈ ಜನಜಂಗುಳಿಯಿಂದ ಶಬ್ಧ ಮಾಲಿನ್ಯದಿಂದ ದೂರವಿದ್ದು ತಮ್ಮ ಕಲ್ಯಾಣವನ್ನು ಮಾಡಿಕೊಳ್ಳುವ ಸಲುವಾಗಿ ಮುನಿಗಳೂ, ತ್ಯಾಗಿಗಳೂ, ತೀರ್ಥಾಧೀಶರೂ ಅಂತಹ ಸ್ಥಳಗಳಿಗೆ ಹೋಗಿ ಧ್ಯಾನ, ಅಧ್ಯಯನ ತಪಾದಿಗಳಲ್ಲಿ ತೊಡಗಿದರು. ಕರ್ಮಕ್ಷಯ ಮಾಡಿ ಮುಕ್ತರಾದರು. ಇದರಿಂದ ಅವು ಪವಿತ್ರಸ್ಥಳಗಳಾಗಿ ತೀರ್ಥಕ್ಷೇತ್ರಗಳೆನಿಸಿ ಭಕ್ತಾದಿಗಳನ್ನು ತನ್ನತ್ತ ಸೆಳೆಯುತ್ತವೆ. ಇವು ಸಾಧಕನ ಆತ್ಮಸಾಧನೆಗೆ, ಧರ್ಮ ಸಾಧನೆಗೆ ನಿರ್ಬಾಧಕ ಸ್ಥಳಗಳಾಗಿವೆ.

ಮಾನವನು ತಮ್ಮ ಮನೆ, ಮಠ, ವ್ಯವಹಾರ, ಉದ್ಯೋಗ ಮತ್ತು ಸಾಂಸಾರಿಕ ಗೊಂದಲಗಳಿಂದ ವ್ಯಾಕುಲನೂ, ಅಶಾಂತಿಯಿಂದ ಕೂಡಿದವನೂ ಆಗಿರುತ್ತಾನೆ. ಕೆಲಕಾಲವಾದರೂ ಇವುಗಳಿಂದ ದೂರವಾಗಿರಲು ಅಂತಹ ಪವಿತ್ರ ಸ್ಥಳಗಳಿಗೆ ಯಾತ್ರೆ ಹೋಗುವುದರಿಂದ ಪ್ರವಾಸವನ್ನು ಕೈಗೊಳ್ಳುವುದರಿಂದ ವಿಶ್ರಾಂತಿಯೂ, ಮನೋನೆಮ್ಮದಿಯೂ, ಭಕ್ತಿಭಾವನೆಯೂ, ಪುಣ್ಯಲಾಭವೂ ಆಗುವುದು. ಅಲ್ಲಿ ಪೂಜೆ, ವಂದನೆ, ಸ್ತೋತ್ರ, ದಾನ ಧರ್ಮಗಳನ್ನು ಮಾಡುವ ಸದವಕಾಶವು

ದೊರೆಯುವುದು.

ಹಲವಾರು ಕ್ಷೇತ್ರಗಳಲ್ಲಿ ಈಗಲೂ ಮಹಾಮುನಿಗಳೂ ತ್ಯಾಗಿಗಳೂ ವಿಹಾರ ಮಾಡುತ್ತಿರುತ್ತಾರೆ. ಯಾತ್ರಿಕರಿಗೆ ಅವರ ದರ್ಶನಭಾಗ್ಯ ದೊರೆಯುವುದು. ಅವರಿಗೆ ಆಹಾರದಾನ ಮಾಡುವ, ಉಪದೇಶ ಕೇಳುವ ಲಬ್ಧಿಯೂ ಒದಗುವುದು. "ಸಾಧೂನಾಂ ದರ್ಶನಂ ಪುಣ್ಯಂ" ಎಂಬಂತೆ ಪುಣ್ಯಲಾಭವೂ ಆಗುವುದು.

**ತೀರ್ಥಕ್ಷೇತ್ರಗಳು ಮೂರು ತೆರನಾಗಿದೆ :**

1) ಸಿದ್ಧಕ್ಷೇತ್ರ 2) ಅತಿಶಯಕ್ಷೇತ್ರ 3) ಪುಣ್ಯಕ್ಷೇತ್ರ.

**ಸಿದ್ಧಕ್ಷೇತ್ರ :** ಸಿದ್ಧಕ್ಷೇತ್ರವೆಂದರೆ ತೀರ್ಥಾಧೀಶರೂ, ಕೇವಲಿಗಳೂ ಮಹಾಮುನಿಗಳೂ ತಪೋಧ್ಯಾನಗಳಿಂದ ಕರ್ಮಕ್ಷಯಮಾಡಿ ಮುಕ್ತರಾಗಿ ಸಿದ್ಧರಾದ ಸ್ಥಳಗಳು, ಸಿದ್ಧಕ್ಷೇತ್ರವೆಂದು ಪವಿತ್ರವೂ ಪ್ರಸಿದ್ಧವೂ ಆಗಿ ವಿಖ್ಯಾತವಾದವು.

ಈ ಸಿದ್ಧಕ್ಷೇತ್ರ ಯಾವುವೆಂದರೆ -ಸಮ್ಮೇದ ಶಿಖರ್‌ಜಿ ಮುಖ್ಯವಾದುದು. ಇಲ್ಲಿ ಮೊದಲಿಗೆ ಎಲ್ಲಾ ತೀರ್ಥಂಕರರೂ ಮುಕ್ತರಾದರು. ಆದರೆ ಹುಂಡಾವಸರ್ಪಿಣಿಯ ಈ ವರ್ತಮಾನಕಾಲದಲ್ಲಿ 20 ಮಂದಿ ತೀರ್ಥಾಧೀಶರು ಮುಕ್ತರಾದರು. ಜೊತೆಗೆ ಬಹಳಷ್ಟು ಮಂದಿ ಮುನಿಗಳೂ, ಕೇವಲಿಗಳೂ ಸಿದ್ಧಪದವಿ ಪಡೆದರು. ಆದ್ದರಿಂದ ಇದು ಅನಾದಿ ಸಿದ್ಧಕ್ಷೇತ್ರ.

ಅನಾದಿ ಸಿದ್ಧ ಗಗನಚುಂಬಿತ ಇಪ್ಪತ್ತು ಕೂಟ ।
ಅನಾದಿ ತೀರ್ಥಂಕರರಿಗಿದು ಮುಕ್ತಕ್ಷೇತ್ರ ॥
ಸಮ್ಮೇದಗಿರಿ ಸಿದ್ಧಕ್ಷೇತ್ರ ಪುಣ್ಯಪಾತ್ರ ।
ಕ್ಷೇತ್ರದರ್ಶನ ಮಾಡಿದವರ ಜನ್ಮ ಪವಿತ್ರ ॥

ಇದರಂತೆಯೇ ಚಂಪಾಪುರಿ, ಪಾವಾಪುರಿ, ಗಿರಿನಾರ್, ಕೈಲಾಸಪರ್ವತ, ಮಥುರಾ, ಪಾವಾಜೀ, ಸೋನಾಗಿರಿ, ದ್ರೋಣಾಗಿರಿ, ರೇಸಿಂಧಗಿರಿ, ನೈನಾಗಿರಿ, ಕುಂಡಲಪುರ, ಉಜ್ಜೈನಿ, ಸಿದ್ಧವರಕೂಟ, ಬಡವಾನೀ, ಗಜಪಂಥ, ಮಾಂಗೀ ತುಂಗೀ, ಕುಂಥಲಗಿರಿ, ಮುಕ್ತಾಗಿರಿ, ಮಂದಾರಗಿರಿ, ರಾಜಗೃಹ, ಪಟನಾ, ತಾರಂಗಾ, ಪಾಲೀತಾನ, ಪಾವಗಢ, ಗಜಪಂಥ, ಕುಂಥಲಗಿರಿ, ಕನಕಗಿರಿ, ಮುಂತಾದವು ಪವಿತ್ರ ಸಿದ್ಧಕ್ಷೇತ್ರಗಳಾಗಿವೆ.



**ಅತಿಶಯ ಕ್ಷೇತ್ರ :** ತೀರ್ಥಾಧೀಶರು ಜನ್ಮತಾಳಿದ ದೀಕ್ಷೆ ಪಡೆದ, ತಪಸ್ಸು ಮಾಡಿದ, ಕೇವಲ ಜ್ಞಾನ ಹೊಂದಿದ, ಸಮವಸರಣದಲ್ಲಿ ವಿಹಾರ ಮಾಡಿದ, ಸ್ಥಳಗಳೂ, ಅತಿಶಯವಾದ ಮಂದಿರ, ಮೂರ್ತಿಗಳಿರುವ ಸ್ಥಳಗಳೂ, ಮಹಾಮುನಿಗಳು ಸಮಾಧಿಯಾದ, ಕೇವಲಿಗಳು ವಿಹಾರ ಮಾಡಿದ ಹಲವು ರೀತಿಯಲ್ಲಿ ಮಹಿಮೆಗಳು ನಡೆದ ಐತಿಹಾಸಿಕವಾದ ಪೌರಾಣಿಕ ಸ್ಥಳಗಳೂ ಅತಿಶಯ ಕ್ಷೇತ್ರಗಳಾಗಿವೆ. ಹಾಗೆಯೇ ಮಠಾಧಿಪತಿಗಳಿರುವ, ಯಕ್ಷಿಯರ ಮಹಿಮೆ ನಡೆಯುವ ಕ್ಷೇತ್ರಗಳೂ ಅತಿಶಯ ಕ್ಷೇತ್ರಗಳೇ.

ಇಂತಹ ಅತಿಶಯ ಕ್ಷೇತ್ರಗಳಾವುವೆಂದರೆ - ಅಯೋಧ್ಯೆ, ಹಿಂದೆ ಶಿಖರ್‌ಜಿಯು ಹೇಗೆ ಎಲ್ಲಾ ತೀರ್ಥಾಧೀಶರ ಮುಕ್ತಿ ಕ್ಷೇತ್ರವಾಗಿದ್ದಂತೆ ಅಯೋಧ್ಯೆಯೂ ಕೂಡ ಹಿಂದೆ ಎಲ್ಲಾ ತೀರ್ಥಂಕರರಿಗೂ ಜನ್ಮಸ್ಥಳವಾಗಿತ್ತು. ಈ ಹುಂಡಾವಸರ್ಪಿಣಿಯ ವರ್ತಮಾನಕಾಲದಲ್ಲಿ ಬೇರೆ ಬೇರೆ ಸ್ಥಳದಲ್ಲಿ ತೀರ್ಥಾಧೀಶರು ಜನ್ಮ ತಾಳುವಂತಾಯಿತು. ಹೀಗೆಯೇ ಅತಿಶಯ ಕ್ಷೇತ್ರಗಳು ಬಹಳ ಇವೆ. ಮುಖ್ಯವಾಗಿ ಹೇಳುವುದಾದರೆ ಹಸ್ತಿನಾಪುರ, ಚಂಪಾಪುರಿ, ಶೌರೀಪುರಿ, (ದ್ವಾರಕಾ) ಕಾಶಿ, ಶ್ರಾವಸ್ತಿ, ಕೌಶಾಂಬಿ, ಚಂದ್ರಪುರಿ, ಕಾಕಂದಿನಗರ, ಭದ್ರಪುರಿ, ಸಿಂಹಪುರಿ, ರತ್ನಪುರಿ, ಮಿಥಿಲಾ, ರಾಜಗೃಹ, ಕುಂಡಲಪುರ ಎಂಬವು ತೀರ್ಥಾಧೀಶರ ಜನ್ಮಸ್ಥಳ. ಚಂಪಾಪುರವು ಮಾತ್ರ ವಾಸುಪೂಜ್ಯರ ಎಲ್ಲಾ ಕಲ್ಯಾಣಗಳೂ ನಡೆದ ಅತಿಶಯ ಕ್ಷೇತ್ರವೂ, ಸಿದ್ಧಕ್ಷೇತ್ರವೂ ಆಗಿದೆ. ದೆಹಲಿ, ಆಗ್ರ ಫಿರೋಜಾಬಾದ್, ಲಖನವೂ, ಲಲಿತಪುರ, ಮದನಪುರ, ಗ್ವಾಲಿಯರ್, ಶಿವಪುರ, ಥೋಬೋನ್‌ಜೀ, ಚಾಂದೇರಿ, ಪಪೌರಾ, ಆಹಾರಕ್ಷೇತ್ರ, ಖಜುರಾಹೊ, ಪಟನಾಗಂಜ್, ಸಾಂಗನೇರ್, ಕೋನೀಜಿ, ಚಮತ್ಕಾರ್‌ಜೀ, ಅಹಿಚ್ಛತ್ರ, ಯಲ್ಲೋರ, ಮಢಿಯಾಜೀ, ವಿದಿಶಾ, ಇಂದೂರು, ಗೊಮ್ಮಟಗಿರಿ, ತಿಜಾರಾ, ಪದ್ಮಪುರಿ, ರಾಣಕಪುರಿ, ಮಹಾವೀರ್‌ಜೀ, ಕೇಸರಿಯಾಜಿ, ಅಜಮೇರ್, ಜಯಪುರ, ಚೂಲಗಿರಿ, ಅಬೂಗಢ, ಕೇಸರಿಯಾಜಿ, ಚಿತ್ತೂರು, ಮಹುವಾ, ಚಾಂದವಾಡ, ದಹೀಗಾಂ, ಕುಂಭೋಜ, ಬಾಹುಬಲಿ, ಕೊಲ್ಲಾಪುರ, ಆಷ್ಟಾ, ಔರಂಗಾಬಾದ್, ಕಚನೇರ್, ಜಟವಾಡ, ಪೈಠಣ್, ನವಾಗಢ, ಕಾರಂಜ, ಭಾತ್‌ಕುಲೀ, ರಾಂಟೇಕ್, ಶ್ರವಣಬೆಳಗೊಳ, ಹೊಂಬುಜ, ಸಿಂಹನಗದ್ದೆ, ಮೂಡುಬಿದ್ರೆ, ಕಾರ್ಕಳ, ನಲ್ಲೂರು, ಧರ್ಮಸ್ಥಳ, ವೇಣೂರು, ಕನಕಗಿರಿ, ಸೋಂದೇಮಠ, ಹಳೇಬೀಡು, ಕಂಬದಹಳ್ಳಿ, ಗೊಮ್ಮಟಗಿರಿ, ನಿಟ್ಟೂರು, ಬಸ್ತಿಬೆಟ್ಟ (ಮಂದರಗಿರಿ) ಪೆನಗೊಂಡೆ, ಮಂಚೇನಹಳ್ಳಿ, ಗುಂಡಲಹಳ್ಳಿ, ಉದಯಗಿರಿ, ಖಂಡಗಿರಿ, ಚಿತಾಂಬೂರು, ತಿರುಮಲೆ ಅರಹಂತಗಿರಿ, ಜಿನಕಂಚಿ, ಪೊನ್ನೂರುಮಲೈ. ಮುಂತಾದ ಹಲವು ಅತಿಶಯ ಕ್ಷೇತ್ರಗಳಿವೆ.

ಪುಣ್ಯಕ್ಷೇತ್ರಗಳು : ಜಗತ್ತಿನಲ್ಲಿರುವ ಎಲ್ಲಾ ಜಿನಮಂದಿರಗಳೂ ಪುಣ್ಯಕ್ಷೇತ್ರಗಳಾಗಿವೆ. ಇಲ್ಲಿರುವ ಜಿನಮಂದಿರಗಳ, ಗೋಪುರ, ಮಾನಸ್ಥಂಭ, ಜಿನಬಿಂಬಗಳ ದರ್ಶನ, ಪೂಜೆ, ಆರಾಧನೆ, ವಂದನೆ, ಸ್ತುತಿ, ಭಜನೆ, ಧರ್ಮ ಪ್ರಭಾವನೆ, ಉತ್ಸವಾದಿಗಳನ್ನು ಮಾಡುವುದರಿಂದ ತೀರ್ಥಯಾತ್ರೆ ಮಾಡುವುದರಿಂದ ದಾನ ಧರ್ಮ ಮಾಡುವುದರಿಂದ ಪುಣ್ಯಲಾಭವಾಗುತ್ತದೆಯಾದ್ದರಿಂದ ಇವೆಲ್ಲಾ ಪುಣ್ಯಕ್ಷೇತ್ರವೆನಿಸಿವೆ.

**ತೀರ್ಥಯಾತ್ರೆಯನ್ನು ಮಾಡುವ ಸಮಯ :**

ತೀರ್ಥಯಾತ್ರೆಯನ್ನು ಯಾವಾಗ ಬೇಕಾದರೂ ಮತ್ತು ಯಾರಾದರೂ ಮಾಡಬಹುದು. ಆದರೆ ಮಳೆಗಾಲ ಮತ್ತು ಹೆಚ್ಚು ಬಿಸಿಲುಗಾಲದಲ್ಲಿ ಮಾಡಬಾರದು. ಆಗ ಅಡಚಣೆಗಳು ಮಾರ್ಗಾಯಾಸ ಹೆಚ್ಚು. ತನಗೆ ಅನುಕೂಲವಾದ ವಯಸ್ಸು, ಆರೋಗ್ಯ, ದೈಹಿಕಸ್ಥಿತಿ, ಸಂಪಾದನೆ, ಒಳ್ಳೆಯ ಮನಸ್ಸು ಇರುವಾಗಲೇ ಯಾತ್ರೆ ಮಾಡಬೇಕು. ಒಳ್ಳೆಯ ಸಮೂಹ, ಸಂಘ, ಸಹವಾಸ ಪರಿವಾರ ಮತ್ತು ಯಾತ್ರಾಸಂಘ, ತ್ಯಾಗಿಗಳ ಸಂಘಗಳಲ್ಲಿ ಹೋಗಬೇಕು. ಅದರಲ್ಲೂ ಅಕ್ಟೋಬರ್‌ನಿಂದ ಮಾರ್ಚಿ ತಿಂಗಳ ಮಧ್ಯೆ ಯಾತ್ರೆಯನ್ನು ಕೈಗೊಂಡರೆ ಉತ್ತಮ. ಆಗ ಉತ್ತರದಲ್ಲಿ ಹವಾಮಾನ ಚೆನ್ನಾಗಿರುತ್ತದೆ.

**ಯಾತ್ರೆಯನ್ನು ಹೇಗೆ ಮಾಡಬೇಕು ? :** ಯಾತ್ರೆ ಮಾಡಬೇಕು. ಕ್ಷೇತ್ರ ನೋಡಬೇಕೆಂಬ ಹುಮ್ಮಸ್ಸು, ಉತ್ಸಾಹ ಮೊದಲು ಇರಬೇಕು. ಉದಾರವಾದ ಶುಭ ಭಾವನೆ ಇರಬೇಕು. ಭಕ್ತಿ ಇರಬೇಕು. ಯಾತ್ರೆಗೆ ಹೋದಮೇಲೆ ಮನೆ-ಮಠಗಳ ಮೋಹವನ್ನು ಮರೆಯಬೇಕು. ಈ ಕಾಲದಲ್ಲಿ ಯಾತ್ರೆ ಮಾಡುವುದು ಬಹಳ ಸುಲಭ. ವಾಹನ ಸೌಕರ್ಯ ಇರುತ್ತದೆ. ಹಿಂದೆ ಯಾತ್ರೆ ಹೋದವರು ಬಹು ಶ್ರಮ ಪಡಬೇಕಾಗಿತ್ತು. ಎತ್ತಿನಗಾಡಿಗಳಲ್ಲಿ ಅಥವಾ ಕಾಲ್ನಡಗೆಯಲ್ಲಿ ಹೋಗಬೇಕಾಗಿತ್ತು. ಆಗ ವರ್ಷಾನುಗಟ್ಟಲೆ ಆಗುತ್ತಿತ್ತು. ಯಾತ್ರೆಗೆ ಹೋಗುವಾಗ ಹೆಚ್ಚು ಸಾಮಾನು, ಪರಿಗ್ರಹ, ತಿಂಡಿಗಳನ್ನು ತೆಗೆದುಕೊಂಡು ಹೋಗಬಾರದು. ಯಾತ್ರಾ ಸಮಯದಲ್ಲಿ ಸರಳವಾದ ಆಹಾರ ಮಾಡಬೇಕು. ಮಿತವಾಗಿರಬೇಕು. ಸಣ್ಣಮಕ್ಕಳನ್ನು ಕಟ್ಟಿಕೊಂಡು ಹೋಗಬಾರದು. ಹಗುರವಾದ ವಸ್ತುಗಳನ್ನು ಕೊಂಡೊಯ್ಯಬೇಕು. ಹಣ ಹೆಚ್ಚು ತೆಗೆದುಕೊಂಡು ಹೋಗಬಾರದು. ಕ್ಯಾಷ್ ಸರ್ಟಿಫಿಕೇಟ್ ತೆಗೆದುಕೊಂಡು ಹೋದರೆ ಉತ್ತಮ. ದೈಹಿಕ ಭೋಗದ ಆಸೆ ಬಿಡಬೇಕು. ಬ್ರಹ್ಮಚರ್ಯ ಪಾಲಿಸಬೇಕು. ಪರಸ್ಪರ ಸ್ನೇಹ, ಸೌಹಾರ್ದವಿರಬೇಕು, ಜಗಳವಾಡಬಾರದು. ನಿಂದೆಯ ಮಾತಾಡಬಾರದು.



ಸಂಘಪತಿಗೆ ಗೌರವ ಕೊಡಬೇಕು. ಅವರ ನಿಯಮಗಳನ್ನು ಪಾಲಿಸಬೇಕು. ಯಾರಲ್ಲೂ ವೈಮನಸ್ಯ, ಕೋಪ, ತಾಪ, ಮಾಡಬಾರದು. ಆರೋಗ್ಯಕ್ಕೆ ಕೆಡಿಸಿಕೊಳ್ಳಬಾರದು.

ಅನ್ಯಸ್ಥಾನೇಕೃತಂ ಪಾಪಂ ತೀರ್ಥಸ್ಥಾನೇ ವಿನಶ್ಯತಿ ।
ತೀರ್ಥಸ್ಥಾನೇ ಕೃತಂ ಪಾಪಂ ವಜ್ರಲೇಪೋಭವಿಷ್ಯತಿ ॥

ಎಂಬಂತೆ ಬೇರೇ ಕಡೆ ಮಾಡಿದ ಪಾಪಕರ್ಮವು ತೀರ್ಥಸ್ಥಾನಗಳಲ್ಲಿ ವಿನಾಶವಾಗುತ್ತದೆ. ಆದರೆ ತೀರ್ಥಸ್ಥಾನಗಳಲ್ಲಿ ಮಾಡಿದ ಪಾಪವು ವಜ್ರಲೇಪದಂತೆ ಬಂಧವಾಗಿ ಮುಂದೆ ದುಃಖವನ್ನು ನೀಡುತ್ತದೆ. ಆದ್ದರಿಂದ ಅಲ್ಲಿ ಹೋದಾಗ ಬಹು ಎಚ್ಚರಿಕೆಯಿಂದ ಇರಬೇಕು. ಹೆಚ್ಚು ಮೌನ, ಭಕ್ತಿಭಾವನೆ, ಶ್ರದ್ಧೆ ಇರಬೇಕು.

ಜಿನರೂ, ತೀರ್ಥಾಧೀಶರೂ ಮುಕ್ತರಾದ ಸ್ಥಳಗಳಲ್ಲಿ ಕೂಟಗಳಲ್ಲಿಂದ ನೇರವಾಗಿ ಸಿದ್ಧಲೋಕದಲ್ಲಿ ಆಯಾ ಸಿದ್ಧಾತ್ಮರು ವಿರಾಜಮಾನರಾಗಿರುತ್ತಾರೆ. ಆ ಕೂಟಾದಿಗಳಲ್ಲಿ ಭಕ್ತಿಯಿಂದ ನಿಂತು ತನ್ನ ಎರಡೂ ಕೈಗಳನ್ನು ಮೇಲೆತ್ತಿ ಮುಗಿದು "ಓಂ ಹ್ರೀಂ ಶ್ರೀಂ ಅನಂತಾನಂತ ಸಿದ್ಧಪರಮೇಷ್ಠಿಭ್ಯೋ ನಮೋನಮಃ" ಎಂದು ಶುಭಭಾವದಿಂದ ವಂದಿಸಬೇಕು, ಸಾಧ್ಯವಾದರೆ, ಒಂದೊಂದು ಅರ್ಘ್ಯವನ್ನೆತ್ತಬೇಕು. ಫಲ, ಪುಂಜಗಳನ್ನು ಇಡಬೇಕು.

ತೀರ್ಥಕ್ಷೇತ್ರಗಳಲ್ಲಿ ಯಾವ ವಿಧದಿಂದಲೂ ಗಲೀಜಾಗಲೀ, ಅಪವಿತ್ರವಾಗಲೀ ಮಾಡಬಾರದು. ಶಕ್ತಿ ಇದ್ದಷ್ಟು ಅಲ್ಲಲ್ಲಿ ದಾನ ಧರ್ಮ ಮಾಡಬೇಕು, ಅವಕಾಶ ಸಿಕ್ಕಾಗ ಮುನಿಗಳಿಗೆ, ತ್ಯಾಗಿಗಳಿಗೆ ಆಹಾರದಾನ ಮಾಡಬೇಕು.

ತಾವು ನೋಡಿದ ಕ್ಷೇತ್ರಗಳ, ಜಿನಬಿಂಬಗಳ, ಮಹಿಮೆಗಳನ್ನು ಮನತುಂಬಿಕೊಂಡು ಬರಬೇಕು. ಆಗಾಗ ಅವುಗಳನ್ನು ಸ್ಮರಿಸಿಕೊಂಡು ನಲಿಯಬೇಕು.

ಹೀಗೆ ಮಾಡಿದ ಯಾತ್ರೆಯಿಂದ ಜನ್ಮ ಸಫಲವಾಗುವುದೂ ಉತ್ತರೋತ್ತರ ಆತ್ಮ ಕಲ್ಯಾಣವಾಗುವುದು.

-----

# ಅಹಿಂಸಾ ಪರಮೋ ಧರ್ಮಃ




ಪರಸ್ಪರೋಪಗ್ರಹೋ ಜೀವಾನಾಂ.

ಶ್ರೀಮತ್ಪರಮ ಗಂಭೀರ ಸ್ಯಾದ್ವಾದಾಮೋಘ ಲಾಂಛನಂ ।
ಜೀಯಾತ್ ತ್ರೈಲೋಕ್ಯನಾಥಸ್ಯ ಶಾಸನಂ ಜಿನಶಾಸನಂ ॥
ಸರ್ವ ಮಂಗಲ ಮಾಂಗಲ್ಯಂ ಸರ್ವ ಕಲ್ಯಾಣಕಾರಕಂ ।
ಪ್ರಧಾನಂ ಸರ್ವ ಧರ್ಮಾಣಾಂ ಜೈನಂ ಜಯಂತಿ ಶಾಸನಂ ॥

ಸತ್ವೇಷು ಮೈತ್ರೀಂ ಗುಣಿಷುಪ್ರಮೋದಂ ।
ಕ್ಲಿಷ್ಟೇಷು ಜೀವೇಷು ಕೃಪಾಪರತ್ವಂ ।
ಮಾಧ್ಯಸ್ಥಭಾವಂ ವಿಪರೀತ ವೃತ್ತೌ ।
ಸದಾ ಮಮಾತ್ಮಾ ವಿದಧಾತು ದೇವ ॥

**ಜೀವದಯೆಯೇ ಜೈನ ಧರ್ಮ -- : -- ಆತ್ಮಸಿದ್ಧಿಯೇ ಜೈನಧರ್ಮದ ಗುರಿ**

ನೀನೂ ಬದುಕು ಇತರರೂ ಬದುಕಲು ಬಿಡು.

ಅಹಿಂಸೆಯಿಂದ ಸುಖ - ತ್ಯಾಗದಿಂದ ಶಾಂತಿ.

ಸಮ್ಯಗ್ದರ್ಶನ-ಸಮ್ಯಜ್ಞಾನ-ಸಮ್ಯಕ್ಚಾರಿತ್ರಗಳು ಸುಖ ಶಾಂತಿಯ ಮಾರ್ಗೋಪಾಯಗಳು.

**ಶುಭಂ - ಭದ್ರಂ - ಮಂಗಲಂ**

# ಅಹಿಂಸೆಯ ಸಂದೇಶ

" ಸತ್ವೇಷು ಮೈತ್ರೀಂ "




**ಈ ಚಿತ್ರದ ಸಂದೇಶವೇನು ?**

ಈ ಚಿತ್ರವು ಅಹಿಂಸೆಯ ಸಂದೇಶವನ್ನು ಸಾರುತ್ತಿದೆ. ಇದು ವೀತರಾಗಿಯ ಮಹಿಮೆ. ಅಹಿಂಸೆಯೇ ಶ್ರೇಷ್ಠವಾದ ಧರ್ಮವಾಗಿದೆ. ಅಹಿಂಸೆಯನ್ನು ಪೂರ್ಣರೂಪವಾಗಿ ಪಾಲಿಸಿ, ಅಹಿಂಸಾ ಮೂರ್ತಿಗಳಾಗಿ, ಅಹಿಂಸೆಯೇ ತಳಹದಿಯಾದ ಧರ್ಮವನ್ನು ಬೋಧಿಸಿದ ಭಗವಾನ್ ಜಿನೇಂದ್ರರು ವಿರಾಜಮಾನರಾಗಿರುವ ಧರ್ಮ ಸಭೆಯಲ್ಲಿ ಸದಾ ಅಹಿಂಸೆಯ ವಾತಾವರಣವೇ ಇರುತ್ತದೆ. ಅಹಿಂಸೆಯನ್ನು ಸೂಚಿಸುವುದೇ ಈ ಚಿತ್ರ. " ಸತ್ವೇಷು ಮೈತ್ರೀಂ " ಎಂಬುದು ಜಗತ್ತಿನ ಎಲ್ಲಾ ಪ್ರಾಣಿಗಳೊಂದಿಗೆ ಮಿತ್ರಭಾವನೆಯಿಂದ ಪರಸ್ಪರ ಹೊಂದಿಕೊಂಡು ವಾತ್ಸಲ್ಯದಿಂದ ಬಾಳಬೇಕು ಎಂಬ ಬೋಧೆಯಾಗಿದೆ. ಇದು ಜೈನಧರ್ಮದ ಮೂಲವಾದ ಅಹಿಂಸೆಯನ್ನೂ ಸಾರುವ ಚಿತ್ರವಾಗಿದೆ. ಇದರಲ್ಲಿ " ಅಹಿಂಸಾ ಪರಮೋ ಧರ್ಮಃ " ಎಂಬ ಧರ್ಮದ ಘೋಷಣೆ ಇದೆ. ಇದು ಸುಖದ ಸಾಧನವಾಗಿದೆ.

**' ಶ್ರೀ ವೀತರಾಗಾಯ ನಮಃ '** ಎಂಬ ಶಿರೋನಾಮೆ ಇದೆ. ರಾಗ, ದ್ವೇಷ, ಮೋಹ ರಹಿತನಾದ ಪರಿಶುದ್ಧ ಪರಮಾತ್ಮನಾದ ಜಿನೇಂದ್ರನ ಬಿಂಬವು ಉತ್ತಮವಾದ ಪರಿಸರದಲ್ಲಿ ಪ್ರಶಾಂತವಾದ ವಾತಾವರಣದಲ್ಲಿ ಬೃಹದ್ ವೃಕ್ಷಗಳ ನಡುವೆಇರುವ ಶಿಲೆಯ ಮೇಲೆ ಪದ್ಮಪೀಠದಲ್ಲಿ ವಿರಾಜಮಾನವಾಗಿದೆ. ಕಾಮ-ಕ್ರೋಧಾದಿಗಳನ್ನು ಗೆದ್ದು ನಿರ್ದೋಷರೂ ವೀತರಾಗಿಗಳೂ ಸರ್ವಜ್ಞರೂ ಹಿತೋಪದೇಶಿಗಳೂ ಆದ ಅರಿಹಂತರ ಪ್ರತಿಕೃತಿಯೇ ಈ ಮೂರ್ತಿ. ಈ ಮೂರ್ತಿಯು ಅತ್ಯಂತ ಪ್ರಕಾಶವನ್ನು ಬೀರುತ್ತಿದೆ. ಅಂದರೆ ಅನುಪಮವಾದ ಸರ್ವಜ್ಞತ್ವವೆಂಬ ಜ್ಞಾನಜ್ಯೋತಿಯನ್ನು ಹೊಂದಿದ ಜಿನೇಂದ್ರರ ಜ್ಞಾನ ಪ್ರಭೆಯು ಸುತ್ತಲೂ ಹರಡಿ ಸಕಲವನ್ನೂ ಪ್ರಕಾಶಪಡಿಸುವಂತಿದೆ. ಇವರು ಎಲ್ಲಾ ಜೀವಿಗಳಿಗೂ

ಹಿತವಾಗುವಂಥಹ ಧರ್ಮೋಪದೇಶವನ್ನು ಸಾರುತ್ತಾ ಇರುವಂತಿದೆ. ಸದಾ ಆತ್ಮಾನಂದದಲ್ಲಿ ಲೀನವಾಗಿ ಜಗತ್ತಿಗೆ ಅಪರಿಗ್ರಹ, ಸಂಯಮ, ಸತ್ಯಗಳ ಬೋಧೆಯನ್ನು ನೀಡುವಂತಿದೆ. ಜಿನೇಂದ್ರರು ಪರಮ ಕರುಣಾಸಿಂಧುವೂ, ಧರ್ಮಪ್ರವರ್ತಕರೂ, ಕೋಮಲ ಹೃದಯರೂ, ಸರ್ವ ಜೀವ ಹಿತೈಷಿಗಳೂ, ಸರ್ವರಿಗೂ ಆಪ್ತರೂ ಆಗಿರುತ್ತಾರೆ. ಅದರ ಪ್ರತಿ ರೂಪವೇ ಜಿನಬಿಂಬ.

ಅದರ ಎದುರಿನಲ್ಲಿ ಅವರ ಸನ್ನಿಧಿಯಲ್ಲಿ ಯಾರೇ ಬಂದರೂ ತಮ್ಮ ಕಾಠಿಣ್ಯತೆಯನ್ನು ವೈರ - ವಿರೋಧವನ್ನೂ ರಾಗ-ದ್ವೇಷವನ್ನೂ, ಮೋಹ-ಮಮತೆಯನ್ನೂ ಕ್ರೋಧಾದಿ ಕಷಾಯಗಳನ್ನೂ ಮರೆತು ಜಿನರ ಧರ್ಮಾಮೃತವನ್ನು ತದೇಕ ಚಿತ್ತದಿಂದ ಪಾನ ಮಾಡಿ ನಲಿಯುತ್ತಾರೆ.

ಈ ಚಿತ್ರದಲ್ಲಿ ಭಗವಂತನ ಎದುರಿಗೆ ಜನ್ಮ ವೈರಿ ಪ್ರಾಣಿಗಳಾದ ಹಸುಹುಲಿ ಗಳು ಒಂದು ತಟ್ಟೆಯಲ್ಲಿರುವ ಜಲವನ್ನು ಕುಡಿಯುತ್ತಿವೆ. ಹಸುವಿನ ಕೆಚ್ಚಲನ್ನು ಹುಲಿ ಮರಿಯೂ, ಹುಲಿಯ ಕೆಚ್ಚಲನ್ನು ಹಸುವಿನ ಕರುವೂ ಕುಡಿಯುತ್ತಿವೆ. ಅಹಾ ! ಇದೊಂದು ಮಹಾಆಶ್ಚರ್ಯಕರವಾದ ಮಹಿಮಾಕರವಾದ ವಿಚಿತ್ರವಾದ ದೃಶ್ಯವಾಗಿದೆ.

ಈ ಪ್ರಾಣಿಗಳು ತಮ್ಮ ವೈರ-ವಿರೋಧ, ಹೆದರಿಕೆಗಳನ್ನು ಬಿಟ್ಟು ನಾವೆಲ್ಲ ಕೇವಲ ಜೀವಾತ್ಮರು ಎಂಬ ವಿಶಾಲ ಭಾವನೆಯನ್ನು ತಾಳಿ ಭಗವಂತನ ಸನ್ನಿಧಿಯಲ್ಲಿ, ಧರ್ಮವೆಂಬ ಪವಿತ್ರ ಜಲವನ್ನು ಕುಡಿಯುತ್ತಿವೆ. ಆ ವೀತರಾಗಿಯ ಎದುರು ಎಲ್ಲ ಒಂದೇ. ಆತ್ಮ ಆತ್ಮರುಗಳಲ್ಲಿ ಮೂಲ ರೂಪದಲ್ಲಿ ಭೇದಭಾವ ವಿಲ್ಲ.

ಆ ದಯಾಮಯನ ಸನ್ನಿಧಿಯ ಮಹಿಮೆಯೇ ಇಂತಹುದು. ಅಲ್ಲಿ ಹೋದವರು ಪರಮಶಾಂತಿಯಿಂದ ಇರುತ್ತಾರೆ. ಅವರ ದಿವ್ಯ ಸಂದೇಶವು ಸರ್ವರಿಗೂ ತಿಳಿಯುವಂತಹುದು, ಆತ್ಮಕಲ್ಯಾಣಕರವಾದುದೂ ಆಗಿರುತ್ತದೆ.

ಎಲ್ಲರಲ್ಲಿ ಜ್ಞಾನದ, ಧರ್ಮದ ಜಾಗೃತವಾಗಿ ಪರಸ್ಪರ ಮೈತ್ರಿಯಿಂದ ವರ್ತಿಸುವಂತಾಗುತ್ತದೆ. ಇದು ವೀತರಾಗತೆಯ ಮಹಿಮೆ.

ಇದು ಅಹಿಂಸೆಯ ದಿವ್ಯ ಸಂದೇಶವಾಗಿದೆ. " ನೀನೂ ಜೀವಿಸು ಇತರರೂ ಜೀವಿಸಲು ಬಿಡು " ಜೀವಿಗೆ ಜೀವಿ ನೆರವು ಎಂಬ ಭಗವಂತನ ಸಂದೇಶವನ್ನು ಕಾರ್ಯತಃ ಈ ಪ್ರಾಣಿಗಳು ದಿಗ್ದರ್ಶನ ಮಾಡುತ್ತಿವೆ.

ಅಹಿಂಸೆಯಿಂದ ಸುಖ, ತ್ಯಾಗದಿಂದ ಶಾಂತಿ ಎಂಬುದನ್ನು ಈ ಪರಸ್ಪರ ಹೊಂದಾಣಿಕೆಯ ವೈರ ತ್ಯಾಗದ ಸ್ನೇಹ ಭಾವದ, ಸುಖ-ಶಾಂತಿಯ, ಧರ್ಮ ಬೋಧಕವಾದ ಈ ಚಿತ್ರವು ಜೈನಧರ್ಮದ ಪ್ರತೀಕವಾಗಿದೆ. ಅಹಿಂಸೆ ತ್ಯಾಗಗಳ ಸಂದೇಶ ಸಾರಿದ ವೀತರಾಗನಿಗೆ ಭಕ್ತಿ ಪೂರ್ವಕ ವಂದನೆಗಳು.

## ಸದ್ಧರ್ಮಾಮೃತ ಗ್ರಂಥ ಪ್ರಕಟಣೆಗೆ ಧನ ಸಹಾಯ ಮಾಡಿದ ಧರ್ಮಾತ್ಮರ ಶುಭ ನಾಮಾವಳಿ

| | | |
|---|---|---|
| 1. | ಶ್ರೀಮತಿ ಲಲಿತಮ್ಮ ಪಿ.ಎ. ರವಿಕೀರ್ತಿ ಛಾರಿಟಬಲ್ ಟ್ರಸ್ಟ್, ತುಮಕೂರು | 10,000 ರೂ. |
| 2. | ಗುಪ್ತದಾನ, ಬೆಂಗಳೂರು | 2,000 ರೂ. |
| 3. | ಚಿ|| ಟಿ.ಪಿ. ಮಹಾವೀರ್ ಯು.ಎಸ್.ಎ. ಟಿ.ಎನ್. ಪುಷ್ಪರಾಜು, ಜಿ.ಎಲ್. ವನಿತ, ತುಮಕೂರು | 1,500 ರೂ. |
| 4. | ಶ್ರೀ ಭೂಪಾಳಂ ಕೆ.ಎಸ್. ಸತ್ಯನಾರಾಯಣ ಶೆಟ್ರು ತಮ್ಮ ಧರ್ಮಪತ್ನಿ ದಿ|| ಶ್ರೀಮತಿ ಲಕ್ಷ್ಮೀದೇವಮ್ಮನವರ ಸ್ಮರಣಾರ್ಥ, ತುಮಕೂರು | 1,000 ರೂ. |
| 5. | ಶ್ರೀಮತಿ ಜಿ.ಆರ್. ಧನಲಕ್ಷ್ಮಮ್ಮ ಸಿ. ರಾಮಚಂದ್ರ, ಸ್ಯಾದ್ವಾದಿ ತುಮಕೂರು | 1,000 ರೂ. |
| 6. | ಶ್ರೀಮತಿ ಶಕುಂತಳ ಮತ್ತು ಶ್ರೀ ಕೆ.ಪಿ. ಸುಮತಿ ಕುಮಾರ್ ಮೈಸೂರು | 1,000 ರೂ. |
| 7. | ಶ್ರೀಮತಿ ಪದ್ಮಾವತಮ್ಮ ಆರ್. ಪಿ. ಚಾರಣ್ಣ, ಹಿಂದೂಪುರ | 1,000 ರೂ. |
| 8. | ಶ್ರೀಮತಿ ನಾಗಲತ ಆರ್.ಜೆ. ಜ್ವಾಲಣ್ಣ, ಮೈಸೂರು | 1,000 ರೂ. |
| 9. | ಶ್ರೀಮತಿ ಸರೋಜ ಎಸ್.ಪಿ. ಚಂದ್ರಕಾಂತ್, ಮೈಸೂರು | 1,000 ರೂ. |
| 10. | ಶ್ರೀ ಜಿ.ಹೆಚ್. ಸುರಪುರ, ಧಾರವಾಡ | 1,000 ರೂ. |
| 11. | ಜೆ.ಪಿ. ಅನಂತರಾಜು, ಮೈಸೂರು | 1,000 ರೂ. |
| 12. | ಶ್ರೀ ಶುಭ ನಾಗರಾಜು, ಮೈಸೂರು | 1,000 ರೂ. |
| 13. | ಶ್ರೀ ಕೆ. ಪಿ. ನಾಗರಾಜ್, ಮೈಸೂರು | 1,000 ರೂ. |
| 14. | ಶ್ರೀ ಎಸ್.ಪಿ. ಪಾಯಿದೇವರು, ಮೈಸೂರು | 1,000 ರೂ. |
| 15. | ಶ್ರೀ ಬಿ.ಡಿ. ನವೀನ್‌ಕುಮಾರ್, ಮೈಸೂರು | 1,000 ರೂ. |
| 16. | ಶ್ರೀ ಸಿ.ಬಿ. ಬ್ರಹ್ಮಸೂರಯ್ಯ ಮತ್ತು ಸರೋಜಮ್ಮ, ಮೈಸೂರು | 1,000 ರೂ. |
| 17. | ಶ್ರೀ ಜಿ.ಟಿ. ಜೀವನ್, ಮೈಸೂರು | 1,000 ರೂ. |
| 18. | ಶ್ರೀ ಎಸ್.ಬಿ. ಗಂಧರ್ವಕುಮಾರ್, ಮೈಸೂರು | 1,000 ರೂ. |

19. ಶ್ರೀ ಇ.ವಿ. ಧನ್ಯಕುಮಾರ್, ಹೊಸದುರ್ಗ 1,000 ರೂ.
20. ಶ್ರೀ ಇ.ವಿ. ಅಶೋಕ ಕುಮಾರ್, ಹೊಸದುರ್ಗ 1,000 ರೂ.
21. ಶ್ರೀ ಪಂಡಿತರತ್ನ ಶಾಂತಿರಾಜ ಶಾಸ್ತ್ರಿ ಟ್ರಸ್ಟ್, ಬೆಂಗಳೂರು 1,000 ರೂ.
22. ಶ್ರೀ ಜಿ.ಬಿ. ಸ್ವರೂಪ್ ಮತ್ತು ಜಿ.ಬಿ. ಸಂದೀಪ್, 1,000 ರೂ.
23. ಶ್ರೀಮತಿ ಶಾಂತ ನಾಗರಾಜ್, ಸಾಲಿಗ್ರಾಮ 1,000 ರೂ.
24. ಶ್ರೀಮತಿ ಜಯಶೀಲಮ್ಮ ಟಿ. ಭರತರಾಜ್, ಮೈಸೂರು 1,000 ರೂ.
25. ಶ್ರೀಮತಿ ಆರ್. ತೀರ್ಥಕುಮಾರ್ ಇಂದ್ರಾಣಿ, ತುಮಕೂರು 501 ರೂ.
26. ಶ್ರೀಮತಿ ಟಿ. ಆರ್. ಜಯಪದ್ಮ ಜಿ.ಆರ್. ಶಿವರಾಮಚಂದ್ರ, ಮೈಸೂರು 501 ರೂ.
27. ಜೈನಮಿಲನ್, ತುಮಕೂರು 501 ರೂ.
28. ಶ್ರೀ ವೈ. ಪಿ. ತಿಮ್ಮಪ್ಪ, ತುಮಕೂರು 501 ರೂ.
29. ಶ್ರೀಮತಿ ಮಾಲತಿ ಡಿ. ವರ್ಧಮಾನ್, ತುಮಕೂರು 501 ರೂ.
30. ಶ್ರೀಮತಿ ಮಾಧುರಿ ಎ.ವಿ. ಸುರೇಶ್, ತುಮಕೂರು 501 ರೂ.
31. ಶ್ರೀಮತಿ ರೂಪಾ ಎ.ವಿ. ಮಹೇಶ್, ತುಮಕೂರು 501 ರೂ.
32. ಶ್ರೀಮತಿ ಪೂನಂ ಎಂ.ಕೆ. ವಿವೇಕ್ ಕಲ್ಪಟ್ಟ, ವೈನಾಡು 501 ರೂ.
33. ಶ್ರೀ ಹೆಚ್. ಸಿ. ಜ್ವಾಲಣ್ಣ, ಎಲ್.ಐ.ಸಿ., ತುಮಕೂರು 501 ರೂ.
34. ನಿಟ್ಟೂರಿನ ಜೈನ ಸಮಾಜ 501 ರೂ.
35. ಶ್ರೀ ಚಂದ್ರಪ್ರಭ ಜೈನ್ ಸಂಘ, ತೋವಿನಕೆರೆ 501 ರೂ.
36. ಶ್ರೀಮತಿ ಪದ್ಮಾವತಮ್ಮ ಎ.ಸಿ. ನೇಮಿಚಂದ್ರಯ್ಯ, ತುಮಕೂರು 501 ರೂ.
37. ಶ್ರೀಮತಿ ಬ್ರಾಹ್ಮಿಲಾ ಎನ್.ಬಿ. ವಿಮಲಕುಮಾರ್, ತುಮಕೂರು 501 ರೂ.
38. ಶ್ರೀ ರಘುಚಂದ್ರ, ಅಜ್ರಿ, ಮೈಸೂರು 501 ರೂ.
39. ಶ್ರೀ ಎಸ್.ಜೆ. ರವಿಕೀರ್ತಿ, ಮೈಸೂರು 501 ರೂ.
40. ಶ್ರೀಮತಿ ರತ್ನಮ್ಮ ಎ.ಸಿ.ಚಾರಣ್ಣ, ಹಿಂದೂಪುರ 501 ರೂ.
41. ಶ್ರೀ ಸಿ.ಪಿ. ಸತ್ಯೇಂದ್ರ ಕುಮಾರ್, ಮೈಸೂರು 501 ರೂ.
42. ಶ್ರೀ ಎ.ಬಿ. ಪಂಡಿತ್, ಗುಲ್ಬರ್ಗಾ 501 ರೂ.
43. ಶ್ರೀ ಎಸ್.ಬಿ. ಪಾಟೀಲ, ಗದಗ 501 ರೂ.
44. ಡಾ|| ಪಿ.ಡಿ. ಪದ್ಮಕುಮಾರ್, ಮೈಸೂರು 501 ರೂ.
45. ಶ್ರೀ ಎಸ್.ಎನ್. ದೇವೇಂದ್ರಯ್ಯ, ಮೈಸೂರು 501 ರೂ.
46. ಶ್ರೀ ಪಿ. ಸುಂದರರಾಜ್, ಪಾವಗಡ 501 ರೂ.
47. ಶ್ರೀ ಆರ್.ಸಿ. ವಿಜಯಕುಮಾರ್, ಮಧುಗಿರಿ 501 ರೂ.
48. ಶ್ರೀ ಡಾ|| ಎ.ಎಲ್. ಬ್ರಹ್ಮಪ್ಪ, ಬೆಂಗಳೂರು 501 ರೂ.
49. ಶ್ರೀಮತಿ ಸರೋಜಮ್ಮ ಹೆಚ್.ಎ. ದೇವೇಂದ್ರಕುಮಾರ್, ಬೆಂಗಳೂರು 501 ರೂ.
50. ಶ್ರೀ ಎಂ. ಜೆ. ಶಾಂತರಾಜ್, ಮೈಸೂರು 501 ರೂ.
51. ಶ್ರೀ ಎಸ್.ಸಿ. ಜಿನರಾಜಯ್ಯ, ಸಾಲಿಗ್ರಾಮ 501 ರೂ.
52. ಶ್ರೀ ಆರ್.ಬಿ. ಚನ್ನಪ್ಪನವರು, ರತ್ನಗಿರಿ 501 ರೂ.
53. ಶ್ರೀ ಜಿನೇಂದ್ರ, ಬಾಬು, ಬೆಂಗಳೂರು 501 ರೂ.
54. ಶ್ರೀಮತಿ ಎ.ವಿ. ಪದ್ಮಿಣಿ, ಬೆಂಗಳೂರು 501 ರೂ.
55. ಶ್ರೀಮತಿ ಎ.ಎನ್. ಸಾವಿತ್ರಮ್ಮ, ಬೆಂಗಳೂರು 501 ರೂ.
56. ಶ್ರೀಮತಿ ಸುಮಂಗಲಮ್ಮ ಎ.ಸಿ. ಸುರೇಂದ್ರಕುಮಾರ್, ತುಮಕೂರು 501 ರೂ.
57. ಶ್ರೀಮತಿ ಜ್ವಾಲಾ, ಮಹಾವೀರ್, ತುಮಕೂರು 501 ರೂ.
58. ಶ್ರೀಮತಿ ಬಿ. ಜಯಪದ್ಮ ಟಿ.ಪಿ. ಇಂದ್ರಕುಮಾರ್, ತುಮಕೂರು 251 ರೂ.
59. ಶ್ರೀಮತಿ ವಿನೋದ ಎಂ.ಡಿ. ಸುರೇಂದ್ರಪ್ಪ, ತುಮಕೂರು 251 ರೂ.
60. ಶ್ರೀಮತಿ ಎಂ.ಡಿ. ಮನೋಹರ ಎ.ಡಿ. ರಾಜಣ್ಣ, ತುಮಕೂರು 251 ರೂ.
61. ಶ್ರೀಮತಿ ಎ.ಆರ್. ಪದ್ಮಲೀಲಾ ದೇವೇಂದ್ರಪ್ಪ, ತುಮಕೂರು 251 ರೂ.
62. ಶ್ರೀಮತಿ ಎ.ಪಿ. ಜ್ವಾಲಮ್ಮ, ಬಿ.ಜೆ. ಕಾಂತರಾಜು, ತುಮಕೂರು 251 ರೂ.
63. ಶ್ರೀಮತಿ ನಾಗಲತ, ಎನ್.ಬಿ. ವೀರೇಂದ್ರಕುಮಾರ್, ತುಮಕೂರು 251 ರೂ.
64. ಶ್ರೀಮತಿ ವನಮಾಲಾ ಎನ್.ಬಿ. ಕಾಂತರಾಜು, ಬಿದರೆ 251 ರೂ.
65. ಶ್ರೀಮತಿ ಪದ್ಮಜ್ಯೋತಿ ಜೆ. ಶಾಂತರಾಜು, ಬೆಂಗಳೂರು 251 ರೂ.

ಮೈಸೂರಿನ ಶ್ರೀ ಸಿ.ಬಿ. ಬ್ರಹ್ಮಸೂರಯ್ಯ, ಶ್ರೀಮತಿ ಸಿ.ಬಿ. ಸರೋಜಮ್ಮನವರ ಸ್ಮರಣಾರ್ಥ
ಮೂರು ವರ್ಣಚಿತ್ರಗಳ ಪ್ರಕಟಣೆಗೆ ಅವರ ಮಕ್ಕಳು ಧನಸಹಾಯ ನೀಡಿದ್ದಾರೆ

# ಸಿ. ರಾಮಚಂದ್ರ ಸ್ಯಾದ್ವಾದಿ ಅವರ ಕೃತಿಗಳು

## ಪ್ರಕಟಿತ ಕೃತಿಗಳು

1. ಶ್ರೀ ಆದಿನಾಥ ಚರಿತ್ರೆ (ಲಾವಣಿ)
2. ಶ್ರೀ ಪಾರ್ಶ್ವನಾಥ ಚರಿತ್ರೆ (ಲಾವಣಿ)
3. ಶ್ರೀ ಮಹಾವೀರ ಚರಿತ್ರೆ (ಲಾವಣಿ)
4. ಶ್ರೀ ಮಹಾವೀರ ಚರಿತ್ರೆ (ಲಾವಣಿ)
5. ಆಚಾರ್ಯ ಕುಂದಕುಂದ ಭಾರತಿ (ಲಾವಣಿ)
6. ಯಶೋಧರ ಚರಿತ್ರೆ (ಲಾವಣಿ)
7. ಬಾಹುಬಲಿ (ಲಾವಣಿ)
8. ದಾನಚಿಂತಾಮಣಿ ಅತ್ತಿಮಬ್ಬೆ (ಲಾವಣಿ)
9. ಶ್ರೀ ಮಹಾವೀರಜಿನ ಸಂಗತಿ (ಲಾವಣಿ)
10. ವರಾಂಗ ಚರಿತೆ (ಸಾಂಗತ್ಯ)
11. ಶ್ರೀ ವೃಷಭಜಿನ ಸಂಗತಿ (ಸಾಂಗತ್ಯ)
12. ಜಿನಮುನಿ ವಂದನೆ (ಸಾಂಗತ್ಯ)
13. ಧರ್ಮದರ್ಪಣ (ಧಾರ್ಮಿಕ ಕಾದಂಬರಿ)
14. ಸುಮನ ಸಂಚಯ (ಲೇಖನ ಸಂಗ್ರಹ)
15. ಜೈನಧರ್ಮ ಬಾಲಬೋಧೆ
16. ಜೈನಧರ್ಮ ಪರಿಚಯ
17. ದಶಧರ್ಮಾರಾಧನೆ
18. ಯಶೋಧರ ಚರಿತ್ರೆ
19. ಜಿನಭಕ್ತಿಗೀತೆಗಳು
20. ಶಿಬಿರಜಿ ವಂದನೆ
21. ಮಹಾವೀರಾಷ್ಟಕ (ಅನುವಾದ)
22. ದಶಧರ್ಮ (ಅನುವಾದ)
23. ಕುಂದಕುಂದ ಭಾರತಿ (ನಾಟಕ)
24. ಮದನ ಸುಂದರಿ
25. ಆದಿನಾಥ ಚರಿತ್ರೆ
26. ಜಿನಧರ್ಮ ದರ್ಪಣ–ಪ್ರಶ್ನೋತ್ತರ ಮಾಲಾ
27. ಜಿನಭಕ್ತಿ ಗೀತಾಂಜಲಿ
28. ಸದ್ಧರ್ಮಾಮೃತ
29. ನೀತಿ ಮುಕ್ತಾವಳಿ

## ಅಪ್ರಕಟಿತ ಕೃತಿಗಳು

1. ಜಿನದತ್ತ ಚರಿತ್ರೆ
2. ಸಂಜಯಂತ ಭಟ್ಟಾರಕರು
3. ಮಹಾಸಂಸಾರಿ (ನಾಟಕ)
4. ಮಹಲ್ಲಿನ ಮೋಹ (ನಾಟಕ)
5. ಸಗರಚಕ್ರಿ (ನಾಟಕ)
6. ನಮಿ ವಿನಮಿ (ನಾಟಕ)
7. ತ್ರಿಲೋಕ ವಂದನೆ (ಅನುವಾದ)
8. ದ್ವಾದಶಾನುಪ್ರೇಕ್ಷೆ (ಅನುವಾದ)
9. ಸಿಂಧೂರ ಪ್ರಕರಣ (ಅನುವಾದ)
10. ತತ್ತ್ವಾರ್ಥಸೂತ್ರ (ಅನುವಾದ)
11. ಇಷ್ಟೋಪದೇಶ (ಅನುವಾದ)
12. ಸಮಾಧಿತಂತ್ರ (ಅನುವಾದ)
13. ಅಹಿಂಸಾ ಮುನಿರತ್ನ (ಕಾದಂಬರಿ)
14. ಮಹಾಮುನಿರತ್ನ (ಕಾದಂಬರಿ)
15. ಶ್ರೀ ಶಾಂತಿಸಾಗರ ಚರಿತ್ರೆ
16. 108 ನುಡಿ ಮುತ್ತುಗಳು
17. ಧಾರ್ಮಿಕ ಮುಕ್ತಕಗಳು (ಚೌಪದಿ)
18. ಅನುಭವಾಮೃತ
19. ಅಧ್ಯಾತ್ಮ ಸೂತ್ರಾಣಿ (ಅನುವಾದ)
20. ದ್ರವ್ಯಸಂಗ್ರಹ (ಅನುವಾದ)
21. ಆತ್ಮಧ್ಯಾನ ಶತಕ (ಅನುವಾದ)
22. ರಯಣಸಾರ (ಅನುವಾದ)
23. ಸದ್ಭಾವ ಸೌರಭ